
ಅಧ್ಯಾಯ 9

ಕಲಿಕೆಯ ಮಾಪನ



'ಮೌಲ್ಯಾಂಕನ', 'ಪರೀಕ್ಷಿಸುವುದು', 'ಪರೀಕ್ಷೆಗಳು' ಇತ್ಯಾದಿ ಪದಗಳೊಂದಿಗೆ ಅನೇಕ ನಕಾರಾತ್ಮಕ ಅಂಶಗಳು ತಳುಕುಹಾಕಿಕೊಂಡಿದ್ದು, ಇಂತಹ ವಿಷಯವೊಂದರ ಮೇಲೆ ಸಮತೋಲನದ ಅಧ್ಯಾಯವೊಂದನ್ನು ಬರೆಯವುದು ಪ್ರಾಯಶಃ ಅಸಾಧ್ಯವೆನಿಸಬಹುದು! ಆದರೂ, ಮೌಲ್ಯಾಂಕನ (assessment)ವನ್ನು ಔಪಚಾರಿಕವಾಗಿಯೇ ಮಾಡಿರಲಿ ಅಥವಾ ಅನೌಪಚಾರಿಕವಾಗಿಯೇ ಮಾಡಿರಲಿ, ಒಬ್ಬೊಬ್ಬರಿಗೇ ಪ್ರತ್ಯೇಕವಾಗಿ ಮಾಡಿರಲಿ ಅಥವಾ ವಿದ್ಯಾರ್ಥಿ ಸಮೂಹವೊಂದಕ್ಕೆ ಒಮ್ಮೆಗೇ ನಡೆಸಿರಲಿ, ಅದು ಬೋಧನೆಯಿಂದ ಪ್ರತ್ಯೇಕಿಸಲಾಗದ ಒಂದು ಅಂಶ ಎಂಬುದನ್ನಂತೂ ಅಲ್ಲಗಳೆಯಲಾಗದು. ಸಾಮಾನ್ಯವಾಗಿ ನಾವು ಒಂದು ಕಿರುಪರೀಕ್ಷೆ (test) ಅಥವಾ ಪರೀಕ್ಷೆಯನ್ನು (examination) ಕಲಿಕಾ ಪ್ರಕ್ರಿಯೆಯ ಅಂತಿಮ ಘಟ್ಟ ಎಂದುಕೊಳ್ಳುತ್ತೇವೆ. ಆದರೆ, ಮೌಲ್ಯಾಂಕನವೂ ಕಲಿಕಾ ಪ್ರಕ್ರಿಯೆಯ ಒಳಗೇ ಹೆಣೆದುಕೊಂಡಿರಬಹುದು ಮತ್ತು ನಿಯಮಿತ ಅಂತರದಲ್ಲಿ ನಡೆಯುತ್ತಾ, ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಬ್ಬರಿಗೂ ನಿರಂತರ ಹಿಮ್ಮಾಹಿತಿಯನ್ನು ನೀಡುವ ಶಿಕ್ಷಕರೇ ರೂಪಿಸುವ ತರಗತಿಯಲ್ಲಿನ ಕಿರುಪರೀಕ್ಷೆಗಳು ಇದರ ಅತ್ಯುತ್ತಮ ಉದಾಹರಣೆಗಳಾಗುತ್ತವೆ.

ಕಲಿಕಾ ಪ್ರಕ್ರಿಯೆಯ ಉದ್ದಕ್ಕೂ ನಡೆಯುವಂತಹ ಇದನ್ನು ರೂಪಣ ಮೌಲ್ಯಾಂಕನ (formative assessment) ಎನ್ನುತ್ತಾರೆ. ಇದು ವಿದ್ಯಾರ್ಥಿಗಳಿಗೆ ತಮ್ಮ ಸಾಮರ್ಥ್ಯ ಮತ್ತು ನ್ಯೂನತೆಗಳನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ ಹಾಗೂ ಬೋಧನೆಯನ್ನು ಇನ್ನಷ್ಟು ಪಕ್ಕಾಗೊಳಿಸಲು ಶಿಕ್ಷಕರಿಗೆ ನೆರವಾಗುತ್ತದೆ. ಕಲಿಕೆಯ ಅಂತ್ಯದಲ್ಲಿ ನಡೆಯುವಂತಹ ಇನ್ನೊಂದನ್ನು ಸಂಕಲನಾತ್ಮಕ ಮೌಲ್ಯಾಂಕನ ಎನ್ನುತ್ತಾರೆ (summative assessment). ಇದು ಬಾಹ್ಯ ಹೇರಿಕೆಯದ್ದು, ಭಾರೀ ಆಸ್ಥೆ (high stakes) ಹೊಂದಿರುವುದೇ ಅಲ್ಲದೇ, ವಿದ್ಯಾರ್ಥಿಗಳ (ಹಾಗೆಯೇ ಶಿಕ್ಷಕರು ಮತ್ತು ಶಾಲೆಯ) ತುಲನಾತ್ಮಕ ಮಾಪನ ಮಾಡುತ್ತದೆ. ಈ ಅಧ್ಯಾಯವು ಇವೆರಡಕ್ಕೂ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುತ್ತದೆ.


ನಾಗರಿಕ ಸೇವೆಗೆ ಸಾಮೂಹಿಕ ಪರೀಕ್ಷೆ ನಡೆಸುವ ಚೈನೀ ವ್ಯವಸ್ಥೆಯಿಂದ ಹಿಡಿದು (ಅಲ್ಲಿ ಉದ್ಯೋಗಾಕಾಂಕ್ಷಿಗಳು ಕವಿತೆ ಮತ್ತು ತತ್ತ್ವಜ್ಞಾನ ಪ್ರಬಂಧಗಳನ್ನು ಬರೆಯಬೇಕಿತ್ತು), ಬೋಧನೆಯೊಂದಿಗೆ ಬೆಸೆದುಕೊಂಡ ಗ್ರೀಕ್ (ಸೋಕ್ರಟಿಕ್) ವಿಧಾನದ ಮೂಲಕ ನಡೆಸುವ ಪರೀಕ್ಷೆಯಿಂದ, ನಮ್ಮೆಲ್ಲ ವಿದ್ಯಾರ್ಥಿಗಳು ಎದುರಿಸುವ ಇಂದಿನ ಅನೇಕ ಪರೀಕ್ಷೆಗಳವರೆಗೆ ಪರೀಕ್ಷಿಸುವ ಕ್ರಿಯೆಯು ಒಂದು ಕುತೂಹಲಕಾರಿ ಚರಿತ್ರೆಯನ್ನು ಹೊಂದಿದೆ. ಅದು ಯಾವಾಗಲೂ ಶಿಕ್ಷಣದ ಪಾಲಿನ ಕೆಡುಕೇನೂ ಆಗಿರಲಿಲ್ಲ. ನಿಜ ಹೇಳಬೇಕೆಂದರೆ, ಕುಖ್ಯಾತಿಯ 'ಬಹುಆಯ್ಕೆ ಪ್ರಶ್ನೆ'ಗಳಂತಹ ಸುಧಾರಿತ ಪರೀಕ್ಷೆಗಳನ್ನು ಸ್ವಾಗತಿಸಲಾಯಿತು. ಆ ಕಾಲದಲ್ಲಿ ಅವನ್ನು ಮೆಚ್ಚಿಕೊಳ್ಳಲಾಯಿತು ಕೂಡ. ಮೌಲ್ಯಾಂಕನವು ಪೂರ್ಣವಾಗಿ ಆಲೋಚನಾರಹಿತ ಅಥವಾ ಅನ್ಯಮನಸ್ಕ ಸಂಶೋಧನೆಯಲ್ಲ. ಆದರೆ, ಅದರೊಂದಿಗಿನ ಅನೇಕ ಸಂಗತಿಗಳು ಇಂದಿನ ದೃಷ್ಟಿಯಲ್ಲಿ ತಪ್ಪು ಎನ್ನುವುದರಲ್ಲಿ ಅನುಮಾನವಿಲ್ಲ. ಈ ಸಂಗತಿಗಳ ಬಗೆಗಿನ ತಪ್ಪು ತಿಳಿವಳಿಕೆಗಳನ್ನು ದೂರಮಾಡಲು ದಾರಿಗಳನ್ನು ಕಂಡುಕೊಳ್ಳುವ ಮುನ್ನ, ಭಾರತದಲ್ಲಿ ಮೌಲ್ಯಾಂಕನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಒಪ್ಪಿಕೊಂಡು ಅವುಗಳನ್ನು ಒರೆಗೆ ಹಚ್ಚಿ ನೋಡಬೇಕು. ಹೆಚ್ಚಿನ ವಿವರಣೆಯ ಅಗತ್ಯವೇ ಇಲ್ಲ ಎನ್ನುವಷ್ಟು ಮಟ್ಟಿಗೆ ಸುಪರಿಚಿತವಾಗಿರುವ ಇಂತಹ ಕೆಲವು ವಿಷಯಗಳನ್ನು ಇಲ್ಲಿ ಪಟ್ಟಿ ಮಾಡಲಾಗಿವೆ.

ಪರೀಕ್ಷೆಗಳನ್ನು ರೂಪಿಸಲು, ನಿರ್ವಹಿಸಲು ಮತ್ತು ಅವುಗಳಿಂದ ಚೇತರಿಸಿಕೊಳ್ಳಲು **ಬೋಧನಾ ಸಮಯದ** ಬಹುಭಾಗವನ್ನು ವಿನಿಯೋಗಿಸಲಾಗುತ್ತದೆ.

- ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಪಾಲಿಗೆ, **ಅಭಿಪ್ರೇರಣೆ**ಯು ಕಲಿಕಾ ಪ್ರಕ್ರಿಯೆಯಿಂದ ಫಲಿತಗಳತ್ತ ಪಲ್ಲಟಗೊಂಡಿದೆ.
- ಪರೀಕ್ಷೆಗಳು ಪಠ್ಯಕ್ರಮವನ್ನು ರೂಪಿಸುತ್ತವೆ. ಇದನ್ನು **'ಪಠ್ಯಕ್ರಮ ಹಿಂದೆರೆ'** ಪರಿಣಾಮ (curricular backwash) ಎನ್ನುತ್ತಾರೆ. ಪರೀಕ್ಷೆಗಳು ದೊಡ್ಡ ಪ್ರಮಾಣದಲ್ಲಿ ಜ್ಞಾನಾಧಾರಿತವಾದಾಗ, ಅರ್ಥಮಾಡಿಕೊಳ್ಳುವಿಕೆ ಅಥವಾ ಅನ್ವಯಕ್ಕೆ ಪಠ್ಯಕ್ರಮವು ನೀಡುವ ಗಮನ ಕಡಿಮೆಯಾಗುತ್ತದೆ.
- ಪರೀಕ್ಷೆಗಳ ಬಗ್ಗೆ ಹೆಚ್ಚೂ ಕಡಿಮೆ ಯಾವಾಗಲೂ ವಿದ್ಯಾರ್ಥಿಗಳು ಆತಂಕವನ್ನು ಅನುಭವಿಸುತ್ತಲೇ ಇರುತ್ತಾರೆ.
- ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೆ ತಾವು ಹೊಣೆ ಎಂದು **ಶಿಕ್ಷಕರು** ಭಾವಿಸಿದಾಗ ಪರೀಕ್ಷೆಗಳು ಅವರನ್ನೂ **ಆತಂಕಕ್ಕೆ** ಈಡುಮಾಡುತ್ತವೆ.

- ಪರೀಕ್ಷೆಗಳು ಹದಿಹರೆಯದವರಲ್ಲಿ **ವಂಚನೆಯನ್ನು** ಪ್ರೋತ್ಸಾಹಿಸುತ್ತವೆ. ಅವರು, ಶಿಕ್ಷಣವೆಂದರೆ ಏನನ್ನೋ ಕಲಿಯುವುದು ಎಂಬುದರ ಬದಲಿಗೆ ಒಳ್ಳೆಯ ಅಂಕಗಳನ್ನು ಪಡೆಯುವುದು ಎಂದುಕೊಳ್ಳುತ್ತಾರೆ.
- 'ಭಾರೀ ಆಸ್ಥೆ'ಯ ಪರೀಕ್ಷೆಗಳ ಫಲಿತಾಂಶಗಳು **ಅನ್ಯಾಯದವುಗಳಾಗಿದ್ದು**, ಅಸಂಖ್ಯ ಯುವಕರನ್ನು ಖಿನ್ನಗೊಳಿಸಬಲ್ಲುವು.

ಇಲ್ಲಿನ ಮೊದಲ ಮೂರು ವಿಷಯಗಳು, ವಾಸ್ತವದಲ್ಲಿ ರೂಢಿಗತ ಪರೀಕ್ಷೆಗಳ ಸಂಕುಚಿತ, ಉರುಹೊಡೆಯುವ ಮತ್ತು ಫಲಿತಾಂಶಮುಖಿ ಸ್ವರೂಪದಿಂದ ಉದ್ಭವಿಸುವಂತಹವು. ಈ ಪರೀಕ್ಷೆಗಳು ಹೆಚ್ಚು ವಿಶಾಲ ತಳಹದಿಯವೂ, ಗುಣಾತ್ಮಕವಾದಂತಹವೂ ಮತ್ತು ಪ್ರಕ್ರಿಯೆಮುಖಿಯೂ ಆದರೆ ಇವೆಲ್ಲ ಮರೆಯಾಗುತ್ತವೆ. ಸರಳವಾಗಿ ಹೇಳಬೇಕೆಂದರೆ, ನಾವು ಏನನ್ನು ಕಲಿಸಬಯಸಿದ್ದೇವೆ ಮತ್ತು ಏನನ್ನು ಪರೀಕ್ಷಿಸಬೇಕಿದೆ ಹಾಗೂ ನಾವು ಕಲಿಸಬೇಕಿರುವ ರೀತಿ ಮತ್ತು ಅದನ್ನು ಪರೀಕ್ಷೆ ಮಾಡುತ್ತಿರುವ ರೀತಿಯ ನಡುವೆ ಉತ್ತಮ ಹೊಂದಾಣಿಕೆ ಇರುವ ಅಗತ್ಯವಿದೆ. ಉದಾಹರಣೆಗೆ, ಶಿಕ್ಷಕರೊಬ್ಬರು ತನ್ನ ಮಕ್ಕಳೊಂದಿಗೆ, ಪುರಾವೆಯ ಮುಕ್ತಾಂತ ವಿಶ್ಲೇಷಣೆ ಮತ್ತು ವಿಮರ್ಶಾತ್ಮಕ ಆಲೋಚನೆಯ ಮೇಲೆ ಒತ್ತು ನೀಡುತ್ತಾ, ಸಿಂಧೂ ಕಣಿವೆಯ ನಾಗರಿಕತೆಯ ಬಗ್ಗೆ ದೀರ್ಘ ಮತ್ತು ಗಹನವಾದ ಪ್ರಕಲ್ಪವನ್ನು (project) ಕೈಗೊಂಡರೆ, ಆಗ 'ಹೊಂದಿಸಿ ಬರೆಯಿರಿ' ಮತ್ತು 'ಸರಿ ತಪ್ಪುಗಳನ್ನು ಗುರುತಿಸಿ' ಇತ್ಯಾದಿ ಪ್ರಶ್ನೆಗಳಿದ್ದ ಪರೀಕ್ಷೆಗಳಲ್ಲಿ ಅವರ ವಿದ್ಯಾರ್ಥಿಗಳು ಕಳಪೆ ಸಾಧನೆ ಮಾಡುವ ಸಾಧ್ಯತೆ ಇದೆ. ಇದರರ್ಥ ಸಿಂಧೂ ಕಣಿವೆಯ ಬಗ್ಗೆಯಾಗಲಿ, ಇತಿಹಾಸದ ಬಗ್ಗೆಯಾಗಲಿ ಅವರು ಏನನ್ನೂ ಕಲಿತಿಲ್ಲವೆಂದಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಪ್ರಾಯಶಃ ಅವನ್ನು ತೋರ್ಪಡಿಸಲು ಪರೀಕ್ಷೆಗಳು ಅವಕಾಶ ಮಾಡಿಕೊಡುವುದಕ್ಕಿಂತಲೂ ಹೆಚ್ಚಿನ ಅನುಭವವನ್ನು ಐತಿಹಾಸಿಕ ವಿಧಾನಗಳು ಮತ್ತು ಪ್ರಾಚೀನ ನಾಗರಿಕತೆಗಳ ಬಗ್ಗೆ ಅವರು ಹೊಂದಿರಬಹುದು. ಆದರೆ, ಪ್ರಕಲ್ಪದ ಸಮಯದಲ್ಲಿ ಬೆಳೆಸಲಾದ ಕೌಶಲಗಳನ್ನು ಮೌಲ್ಯಾಂಕನ ಮಾಡಲು ಸಾಧ್ಯವಾಗುತ್ತಿದ್ದರೆ, ಆ ತಾಳಮೇಳ ಉತ್ತಮವಾಗಿರುತ್ತದೆ. ಅಂತಹ ಸನ್ನಿವೇಶದಲ್ಲಿ 'ಪರೀಕ್ಷೆಗಾಗಿ ಕಲಿಸುವುದು' ಮತ್ತು ಪಠ್ಯಕ್ರಮದ 'ಅಡ್ಡಪರಿಣಾಮಗಳು' ದೊಡ್ಡ ಸಮಸ್ಯೆಗಳಾಗಿ ಕಾಣಿಸಿಕೊಳ್ಳುವುದಿಲ್ಲ.




ಇಂತಹ ಪರೀಕ್ಷಾ ವಿಧಾನಗಳು ಇವೆಯೇ? ಮುಕ್ತಾಂತ ಪ್ರಶ್ನೆಗಳು (open ended questions), ಪ್ರಾತ್ಯಕ್ಷಿಕೆಗಳು, ಪ್ರದರ್ಶಕಗಳು (exhibits), ವೇಗಾಧಾರಿತ ಪರೀಕ್ಷೆಗಳು (Speeded tests), ಸಹಯೋಗ ರೂಪದ ಪರೀಕ್ಷೆಗಳು (collaborative tests) ಮತ್ತು ಸಂಪುಟ (portfolio) ದಂತಹ ನೈಜ ಪರಿಹಾರಗಳನ್ನು ರೂಪಿಸಲಾಗಿದೆ. ಒಟ್ಟಾಗಿ ಇವನ್ನು ದೃಢೀಕೃತ ಮೌಲ್ಯಾಂಕನ (authentic assessment) ತಂತ್ರಗಳು ಎನ್ನುತ್ತಾರೆ. ಅಲ್ಪ ಪ್ರಮಾಣದಲ್ಲಿ ಇವನ್ನು ತೀವ್ರವಾಗಿ

ಬಳಸಲಾಗಿದೆ. ಸಾಮೂಹಿಕವಾಗಿ ಪರೀಕ್ಷಿಸುವ ರೂಢಿಗತ ವಿಧಾನಗಳಿಗೆ ಹೋಲಿಸಿದರೆ, ಅನೇಕ ರೀತಿಯಲ್ಲಿ ದೃಢೀಕೃತ ಮೌಲ್ಯಾಂಕನವು ಉನ್ನತಮಟ್ಟದ್ದು ಎಂದು ಸಂಶೋಧನೆಗಳು ಹೇಳುತ್ತವೆ. ಪರೀಕ್ಷಿಸುವುದಕ್ಕೆ ಸಂಬಂಧಿಸಿದ ಭಾವನಾತ್ಮಕ ಮತ್ತು ನೈತಿಕ ವಿಷಯವನ್ನು ಕೂಡ ಅದು ನಿಭಾಯಿಸುತ್ತದೆ. ಆದರೆ ದೃಢೀಕೃತ ಮೌಲ್ಯಾಂಕನವನ್ನು ವ್ಯಾಪಕವಾಗಿ ಸ್ವೀಕರಿಸುವ ಮತ್ತು ಬಳಸುವ ಹಾದಿಯಲ್ಲಿ ಭಾರೀ ಅಡ್ಡಿ ಆತಂಕಗಳಿವೆ. ವಿದ್ಯಾರ್ಥಿಗಳ ಸಂಖ್ಯೆ ಭಾರೀ ದೊಡ್ಡದಿರುವಾಗ, ದೃಢೀಕೃತ ಮೌಲ್ಯಾಂಕನಗಳಿಗೆ ಬದಲಾಯಿಸಿಕೊಳ್ಳಬೇಕೆಂದರೆ, ನಮ್ಮ ಶೈಕ್ಷಣಿಕ ವ್ಯವಸ್ಥೆಯು ಸದ್ಯ ನೀಡಲು ಸಿದ್ಧವಿರುವ ಸಮಯಕ್ಕಿಂತಲೂ ಹೆಚ್ಚಿನ ಸಮಯ ಬೇಕಾಗುತ್ತದೆ. ಸಂಪೂರ್ಣವಾಗಿ ಇನ್ನೊಂದು ವ್ಯವಸ್ಥೆಗೆ ಹೋಗುವುದು ಏಕೆ ಕಷ್ಟಕರವೆನ್ನುವುದಕ್ಕೆ ಎರಡನೆಯ ಕಾರಣವೆಂದರೆ, ಪರ್ಯಾಯ ಮೌಲ್ಯಾಂಕನ ವಿಧಾನಗಳನ್ನು ಅಳವಡಿಸಿದರೆ, ನಾವು ವಸ್ತುನಿಷ್ಠತೆಯನ್ನು ಕಳೆದುಕೊಳ್ಳುತ್ತೇವೆ ಎಂಬ ಭಯ. ಇದೊಂದು ಬಹುಮುಖ್ಯ ಅಂಶ. ಪ್ರಸ್ತುತ ಅಧ್ಯಾಯದ ಮುಂದಿನ ಭಾಗದಲ್ಲಿ ಇದನ್ನು ವಿವರವಾಗಿ ಚರ್ಚಿಸಲಾಗಿದೆ. ಪರೀಕ್ಷಾ ಕ್ರಮಗಳಲ್ಲಿನ ಈಗಿನ ಸಮಸ್ಯೆಗಳನ್ನು ಇನ್ನಷ್ಟು ಚೆನ್ನಾಗಿ ಅರ್ಥಮಾಡಿಕೊಳ್ಳಲು ಮತ್ತು ಪರ್ಯಾಯಗಳನ್ನು ಮೌಲ್ಯಮಾಪನ ಮಾಡುವುದು ಸಾಧ್ಯವಾಗಲು, ಮಾಪನ ಸಿದ್ಧಾಂತಕ್ಕೆ ಸಂಬಂಧಿಸಿದ ಕೆಲವು ಮೂಲಭೂತ ಅಂಶಗಳನ್ನು ಮೊದಲು ಅರ್ಥಮಾಡಿಕೊಳ್ಳಬೇಕು.

ಮನೋವೈಜ್ಞಾನಿಕ ಪರೀಕ್ಷೆಯ ಮೂಲ ವಿಚಾರಗಳು

ನಾವು ಏನನ್ನು ಕಲಿತಿದ್ದೇವೆ ಎಂಬುದನ್ನು ಅಳೆಯುವುದೇ ಮೌಲ್ಯಾಂಕನ ಮತ್ತು ಅಂತಹ ಯಾವುದೇ ಅಳೆಯುವ ಕಾರ್ಯದಲ್ಲಿ **ಸಮಂಜಸತೆ** (validity) ಮತ್ತು **ವಿಶ್ವಾಸಾರ್ಹತೆ** (reliability) ಎಂಬ ಎರಡು ಪ್ರಧಾನ ಗುಣಗಳಿರಬೇಕಾಗುತ್ತದೆ. 'ಸಮಂಜಸತೆ' (validity) ಎಂದರೆ, ಏನನ್ನು




ಅಳೆಯಬೇಕಿದೆಯೋ ಅದನ್ನು ಒಂದು ಪರೀಕ್ಷೆಯು ಎಷ್ಟರಮಟ್ಟಿಗೆ ಅಳೆಯುತ್ತದೆ ಎಂಬುದು. ಇದೊಂದು ಸುತ್ತಿ ಬಳಸಿ ನೀಡಿದ ಹೇಳಿಕೆಯಂತೆ ನಿಮಗೆ ಭಾಸವಾಗಬಹುದು. ಆದರೆ, ಈ ಭಾಗದ ಕೊನೆಯ ವೇಳೆಗೆ ಇದನ್ನು ನೀವು ಇನ್ನೂ ಉತ್ತಮವಾಗಿ ಅರ್ಥಮಾಡಿಕೊಳ್ಳುತ್ತೀರಿ. 'ವಿಶ್ವಾಸಾರ್ಹತೆ' (reliability) ಎಂದರೆ, ಪರೀಕ್ಷೆಯು ಎಷ್ಟರಮಟ್ಟಿಗೆ ಮಾಪನದ ದೋಷಗಳಿಂದ ಮುಕ್ತವಾಗಿದೆ ಎಂಬುದು. ಉದಾಹರಣೆಗೆ, ಪರೀಕ್ಷೆಯನ್ನು ಪುನರಾವರ್ತಿಸಿದಾಗ ಅದು ಒಂದೇ ರೀತಿಯ ಫಲಿತಾಂಶವನ್ನು ಕೊಡಬೇಕು. ಅಧ್ಯಯನದ ಯಾವುದೇ ಕ್ಷೇತ್ರದಲ್ಲಿನ ಮಾಪನಕ್ಕೆ, ಸ್ವೀಕೃತ ಮಟ್ಟದ ಸಮಂಜಸತೆ ಮತ್ತು ವಿಶ್ವಾಸಾರ್ಹತೆ ಇರಬೇಕಾಗುತ್ತದೆ. ಆದರೆ ಯಾವುದು ಸ್ವೀಕಾರಾರ್ಹ ಎಂಬುದು ಕ್ಷೇತ್ರವನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ, ಭೌತವಿಜ್ಞಾನದಲ್ಲಿ ಕಾಣುವಂತಹ ಉನ್ನತ ಮಟ್ಟದ ಸಮಂಜಸತೆ ಮತ್ತು ವಿಶ್ವಾಸಾರ್ಹತೆಯನ್ನು ಮನೋವಿಜ್ಞಾನ ಹಾಗೂ ಶಿಕ್ಷಣದ ಕ್ಷೇತ್ರದಲ್ಲಿ ನಿರೀಕ್ಷಿಸಲಾಗದು. ಈ ಎರಡು ಗುಣಗಳು ಶೈಕ್ಷಣಿಕ ಮೌಲ್ಯಾಂಕನದ ಸಂದರ್ಭದಲ್ಲಿ ಹೇಗೆ ಕೆಲಸಮಾಡುತ್ತವೆ ಎಂಬುದನ್ನು ನೋಡೋಣ.

ಒಬ್ಬ ವಿದ್ಯಾರ್ಥಿನಿಗೆ ಸಂಖ್ಯಾಶಾಸ್ತ್ರದ ತರಗತಿಯಲ್ಲಿ, ಮಾಧ್ಯ (mean), ಮಾಧ್ಯಕ (median) ಮತ್ತು ಬಹುಲಕದ (mode) ಬಗ್ಗೆ ನಾನು ಕಲಿಸಿದ್ದೇನೆ ಎಂದಿಟ್ಟುಕೊಳ್ಳೋಣ. ಅವನ್ನು ಲೆಕ್ಕಹಾಕುವುದು ಹೇಗೆ? ಅವುಗಳ ಕೆಲವು ಸರಳ ಗುಣಲಕ್ಷಣಗಳು ಮತ್ತು ಅವುಗಳ ಬಳಕೆ ಹಾಗೂ ದುರ್ಬಳಕೆಗಳ ಬಗ್ಗೆ ಆಕೆಗೆ ನಾನು ಕಲಿಸಿಕೊಡುತ್ತೇನೆ. ಹೊಸ ಕಲಿಕೆಯು ಆಕೆಯ ಮಿದುಳಿನಲ್ಲಿ ಸಂಕೀರ್ಣ ರೀತಿಯಲ್ಲಿ ಮಿಲಿಯಗಟ್ಟಲೆ ನರಕೋಶಗಳಲ್ಲಿ ಅಂತರ್ ಜೋಡಣಾ ಕ್ರಮದಲ್ಲಿ ದಾಖಲಾಗುತ್ತದೆ. ಅವೆಲ್ಲವೂ ಆಕೆಯ ಮಿದುಳಿನಲ್ಲಿ ಇವೆಯೇ ಎಂದು ಮಿದುಳನ್ನು ಸ್ಕ್ಯಾನ್ ಮಾಡುವ ಒಂದು ವಿಧಾನ ಇದ್ದರೆ? ಪರೀಕ್ಷೆಗಳ ಬದಲಿಗೆ ವಿದ್ಯಾರ್ಥಿಗಳು ಪ್ರತಿವರ್ಷದ ಕೊನೆಯಲ್ಲಿ ನೋವಿಲ್ಲದ ಮಿದುಳಿನ ಸ್ಕ್ಯಾನ್‌ಗೆ ಒಳಗಾಗುವಂತಿದ್ದರೆ, ವಿಷಯ ಹೇಗೆ ಭಿನ್ನವಾಗಿರುತ್ತಿತ್ತು ಎಂಬುದನ್ನು ಕಲ್ಪಿಸಿಕೊಳ್ಳಿ. ಅಂತಹ ಒಂದು ಮಾಪನವು ಅತ್ಯಧಿಕ ವಿಶ್ವಾಸಾರ್ಹ ಹಾಗೂ ಸಮಂಜಸವಾಗಿರುತ್ತಿತ್ತು. ಆದರೆ, ಅಂತಹದೊಂದನ್ನು ಇನ್ನೂ ಸಂಶೋಧಿಸಿಲ್ಲ.

ಒಬ್ಬ ವಿದ್ಯಾರ್ಥಿನಿಯು ಏನು ಕಲಿತಿದ್ದಾಳೆ ಎಂದು ತಿಳಿಯಲು ಆಕೆಗೆ ತಾನು ಕಲಿತಿದ್ದನ್ನು ಬಳಸಬೇಕಾಗುವ ಒಂದು ಸನ್ನಿವೇಶ, ಕಾರ್ಯಚಟುವಟಿಕೆಯನ್ನು (task) ಕೊಡುತ್ತೇನೆ. ಇದು ಅಭ್ಯಾಸ ಹಾಳೆ (worksheet), ಹೋಂವರ್ಕ್‌ನಂತಹ ನಿಯೋಜಿತಕಾರ್ಯ (assignment) ಅಥವಾ ಒಂದು ಶೈಕ್ಷಣಿಕ ಪರೀಕ್ಷೆ ಆಗಿರಬಹುದು. ಆಕೆಯ **ಸಾಧನೆಯು**, ಆಕೆಯ **ಸಾಮರ್ಥ್ಯವನ್ನು** (ಜ್ಞಾನ, ಕೌಶಲಮಟ್ಟ ಮತ್ತು ತಿಳಿವಳಿಕೆ) ತಿಳಿದುಕೊಳ್ಳಲು ನನಗೆ ಅನುವುಮಾಡಿಕೊಡಬೇಕು. ಹೀಗೆ ನಾನಾ ಸಂಗತಿಗಳನ್ನು ಅಳೆಯುವ ಲೋಹದ ಅಳತೆಪಟ್ಟಿ ಅಥವಾ ತೂಕದ ಯಂತ್ರ ಅಥವಾ ರಕ್ತದೊತ್ತಡ ಪರೀಕ್ಷೆಯ ಉಪಕರಣವು ಅಳೆಯುವ ಹಾಗೆಯೇ, ಈ ಕಾರ್ಯವು ಕಲಿಕೆಯನ್ನು ಅಳೆಯುವ ಒಂದು ಸಾಧನವಾಗುತ್ತದೆ. ಆದರೆ, ಶೈಕ್ಷಣಿಕ ಪರೀಕ್ಷೆಗಳಂತಲ್ಲದ, ಲೋಹದ ಅಳತೆಪಟ್ಟಿಗಳು ವಿವಾದಾತೀತ ಸಾಧನಗಳು. ಲೋಹದ ಅಳತೆಪಟ್ಟಿಗಳ (metal rulers) ಗುಣಾವಗುಣಗಳ ಬಗ್ಗೆ ವಾಗ್ವಾದ ಮಾಡುವವರು, ಅಥವಾ ಅವುಗಳ ಬಗ್ಗೆ ಅಸಮಾಧಾನ ಹೊಂದಿರುವವರನ್ನು ನೀವು ಕಾಣಲಾರಿರಿ. ಪರೀಕ್ಷೆಗಳು ಏಕೆ ಅಷ್ಟೊಂದು ವಿವಾದಾತ್ಮಕವಾಗಿವೆ ಮತ್ತು ನಾವೇಕೆ ಅವುಗಳತ್ತ ಗಮನ ಹರಿಸಬೇಕು ಎಂಬ ಕಾರಣಗಳಿಗೂ, ವ್ಯಾಖ್ಯೆ, ಸಮಂಜಸತೆ ಮತ್ತು ವಿಶ್ವಾಸಾರ್ಹತೆಯ ಸಮಸ್ಯೆಗಳಿಗೂ ಸಂಬಂಧವಿದೆ. ಆ ವಿಷಯಗಳನ್ನು ಮುಂದೆ ನಾವು ಒಂದೊಂದಾಗಿ ನೋಡೋಣ.

ಲೋಹದ ಅಳತೆಪಟ್ಟಿಯ ಉದ್ದೇಶವೆಂದರೆ, ಉದ್ದವನ್ನು ಅಳೆಯವುದು. ಉದ್ದದ ವ್ಯಾಖ್ಯೆಯ ಬಗ್ಗೆ ಜನರಲ್ಲಿ ಸಹಮತವಿದೆ (ಒಂದು ತುದಿಯಿಂದ ಇನ್ನೊಂದು ತುದಿಗೆ ಇರುವ ಅಳತೆ ಎಂದು ಅದನ್ನು ಒಂದು ಪದಕೋಶ ಹೇಳುತ್ತದೆ). ಉದಾಹರಣೆಗೆ, ರೇಖೆಯೊಂದರ ಉದ್ದವು ಭೂಮಿಯ ಉತ್ತರ–ದಕ್ಷಿಣ ಅಕ್ಷದೊಂದಿಗೆ ಅದು ಮಾಡುವ ಕೋನವಾಗಿರಬೇಕು ಎಂದು ಯಾರಾದರೂ ವಾದಿಸುವುದನ್ನು ನಾವು ಕೇಳಲಾರೆವು. **ವ್ಯಾಖ್ಯೆಯ** ಬಗೆಗಿನ ಈ **ಸಹಮತ**ದ ಹಿನ್ನೆಲೆಯಲ್ಲಿ, ಉದ್ದವನ್ನು ಅಳೆಯುವ, ತಕ್ಕಮಟ್ಟಿನ ಉತ್ತಮ ಕಾರ್ಯವನ್ನು ಲೋಹದ ಅಳತೆಪಟ್ಟಿಯು ಮಾಡುತ್ತದೆ. ಅದು ಏನನ್ನು ಮಾಡಬೇಕಾಗಿದೆಯೋ ಅದನ್ನು, ಅಂದರೆ, ಒಂದು ತುದಿಯಿಂದ ಇನ್ನೊಂದು ತುದಿಗೆ ಎಷ್ಟಿದೆ ಎನ್ನುವುದನ್ನು, ಅದು ಸ್ಪಷ್ಟವಾಗಿ ಅಳೆಯುತ್ತದೆ; ಆದ್ದರಿಂದ ಅದೊಂದು **ಸಮಂಜಸ** ಸಾಧನ. ಹಾಗೆಯೇ ಲೋಹದ ಅಳತೆಪಟ್ಟಿಯಿಂದ ಪದೇಪದೇ ಅಳೆದಾಗಲೂ ಅದು ಬಹುತೇಕ ಒಂದೇ ರೀತಿಯ ಬೆಲೆಯನ್ನು ಕೊಡುವುದರಿಂದ ಆ ಸಾಧನವು **ವಿಶ್ವಾಸಾರ್ಹ** ಎನಿಸಿಕೊಳ್ಳುತ್ತದೆ. ಸಮಂಜಸತೆ ಮತ್ತು ವಿಶ್ವಾಸಾರ್ಹತೆ ಇಲ್ಲದಿದ್ದರೆ ಆ ಸಾಧನವು ವಸ್ತುತಃ ನಿರುಪಯುಕ್ತವಾಗುತ್ತದೆ. ವಕ್ರವಾದ ಅಥವಾ ಏರುಪೇರಿನ ಅಂಚುಗಳಿರುವ ಲೋಹದ ಅಳತೆಪಟ್ಟಿಯನ್ನು ಬಳಸುವುದನ್ನು ಕಲ್ಪಿಸಿಕೊಳ್ಳಿ. ಸಮಂಜಸವಲ್ಲದ ಒಂದು ಉಪಕರಣ ಅಥವಾ ಉದ್ದವನ್ನು ಅಳೆಯಲು ಸರಿಯಾದ ಅಳತೆಗೆ ಹೊಂದಿಸಿದ ಇಲಾಸ್ಟಿಕ್ (ಸ್ಥಿತಿಸ್ಥಾಪಕ) ಪಟ್ಟಿಯೊಂದನ್ನು ಬಳಸುವುದನ್ನು ಕಲ್ಪಿಸಿಕೊಳ್ಳಿ. ಅದೊಂದು ವಿಶ್ವಾಸಾರ್ಹವಲ್ಲದ ಉಪಕರಣವೆನಿಸಿಕೊಳ್ಳುತ್ತದೆ.

ಈಗ ಶೈಕ್ಷಣಿಕ ಪರೀಕ್ಷೆಗಳ ಪ್ರಸಂಗವನ್ನು ನೋಡೋಣ. ವಿದ್ಯಾರ್ಥಿಗಳ ಜ್ಞಾನ (knowledge) ಮತ್ತು ತಿಳಿವಳಿಕೆಯನ್ನು (understanding) ಅಳೆಯುವುದು ಅದರ ಉದ್ದೇಶ. ಲೋಹದ ಅಳತೆಪಟ್ಟಿಯಷ್ಟು ಸಮಂಜಸ ಮತ್ತು ವಿಶ್ವಾಸಾರ್ಹವೆನಿಸಿಕೊಂಡ ಅಳೆಯುವ ಉಪಕರಣವಂತೂ ನಮ್ಮ ಬಳಿ ಇಲ್ಲವೆಂಬುದಂತೂ ಸುಸ್ಪಷ್ಟ. ವ್ಯಕ್ತಿಯೊಬ್ಬರ ಎತ್ತರವನ್ನು ಅಳೆಯವುದು ತೀರಾ ಸುಲಭ. ಆದರೆ ಪರಿಕಲ್ಪನೆಯೊಂದರ ಬಗೆಗಿನ ಅವರ ತಿಳಿವಳಿಕೆಯ ಮಟ್ಟವು ಮೇಲ್ನೋಟಕ್ಕೆ ಕಾಣದ್ದೂ, ಬದಲಾವಣೆಯಾಗುವಂತಹದ್ದೂ ಆಗಿದ್ದು, ಅವರ ವರ್ತನೆಯ ಮೂಲಕ ಅದನ್ನು ತೀರ್ಮಾನಿಸಬೇಕಾಗುತ್ತದೆ. ಆದ್ದರಿಂದ, ಉದ್ದದ ಬಗ್ಗೆ ಇದ್ದಂತೆಯೇ, ಜ್ಞಾನ ಮತ್ತು ತಿಳಿವಳಿಕೆಯ ವ್ಯಾಖ್ಯೆಯ ಬಗ್ಗೆಯೂ ನಮಗೆ ಸಹಮತವಿರಬೇಕಾಗುತ್ತದೆ.



ಒಬ್ಬ ಶಿಕ್ಷಕರಾಗಿ, ಜ್ಞಾನ ಮತ್ತು ತಿಳಿವಳಿಕೆಯನ್ನು ಹೇಗೆ ವ್ಯಾಖ್ಯಾನಿಸುತ್ತೀರಿ ಎಂದು ನಿಮ್ಮನ್ನು ಕೇಳುವುದು ನಿಜಕ್ಕೂ ಕುತೂಹಲಕರ ಸಂಗತಿ. ಬಹುಶಃ ನಿಮ್ಮ ಉತ್ತರ ಹೀಗಿರಬಹುದು: ನನ್ನ ವಿದ್ಯಾರ್ಥಿಗಳು x, y ಅಥವಾ z ಮಾಡಲು ಸಮರ್ಥನಾದರೆ, ಅವರು ಅರ್ಥಮಾಡಿಕೊಂಡಿದ್ದಾರೆ ಎಂದರ್ಥ. ಸಾಮಾನ್ಯವಾಗಿ ಇಲ್ಲಿನ ಉತ್ತರವು ಸ್ವತಃ

ಅಳೆಯುವ ಪ್ರಕ್ರಿಯೆಯ ರೂಪದಲ್ಲಿದೆ. ತಿಳಿದುಕೊಂಡಿರುವುದು ಎಂದರೆ, ಒಂದಷ್ಟು ನಿರ್ದಿಷ್ಟ ಪ್ರಶ್ನೆಗಳನ್ನು ಸರಿಯಾಗಿ ಉತ್ತರಿಸುವ ಸಾಮರ್ಥ್ಯ ಎಂದು ನಾವು ಹೇಳುತ್ತೇವೆ. ಆದರೆ, ಇಲ್ಲಿ ಸಮಸ್ಯೆ ಇರುವುದು ಪ್ರಶ್ನೆಗಳ ಆಯ್ಕೆಯಲ್ಲಿ. ತಿಳಿವಳಿಕೆಯ ಬಗೆಗಿನ ಒಂದು ನಿರ್ದಿಷ್ಟ ವ್ಯಾಖ್ಯೆಯ ಕುರಿತು ಎಲ್ಲರಿಗೂ ಸಹಮತ ಇರುವುದಿಲ್ಲ. ಹಾಗೆಯೇ ಪ್ರಶ್ನೆಗಳ ಒಂದು ನಿರ್ದಿಷ್ಟ ಆಯ್ಕೆಯ ಬಗ್ಗೆಯೂ ಎಲ್ಲರಿಗೂ ಸಹಮತ ಇರುವುದಿಲ್ಲ. ವಿಶೇಷವಾಗಿ ಬುದ್ಧಿಮತ್ತೆ ಮತ್ತು ತಿಳಿವಳಿಕೆ ಎಂದರೆ ಪರೀಕ್ಷೆಗಳಲ್ಲಿನ ಸಾಧನೆ ಎಂದೇ ಅನಿಸಿಕೊಳ್ಳುವುದರಿಂದ, ವ್ಯಾಖ್ಯೆಯ ಬಗೆಗಿನ ಈ ಮೂಲಭೂತ ಸಮಸ್ಯೆಯನ್ನು ಮರೆತು ಬಿಡುವುದು ತುಂಬಾ ಸುಲಭ. ಸ್ವಲ್ಪ ಹಿಂದಕ್ಕೆ ಸರಿದು, 'ನನ್ನ ವಿದ್ಯಾರ್ಥಿಗಳು ಏನನ್ನು ಕಲಿಯಬೇಕೆಂದು ನಾನು ಬಯಸಿದ್ದೇನೆಯೋ ಅದರ ಸಾರಸತ್ವವನ್ನು ಈ ಪರೀಕ್ಷೆ ಅಥವಾ ಕಿರುಪರೀಕ್ಷೆ ಈಡೇರಿಸುತ್ತಿದೆಯೇ? ನನ್ನೆಲ್ಲ ವಿದ್ಯಾರ್ಥಿಗಳು, ಪಠ್ಯವಿಷಯದ ಯಾವ ಅಂಶದ ಮೇಲೆ ಪ್ರಭುತ್ವವನ್ನು ಸಾಧಿಸಬೇಕೆಂದು ನಾನು ಬಯಸುತ್ತೇನೆ? ಯಾವ ಸಾಮರ್ಥ್ಯಗಳು ಸಮರ್ಥರನ್ನೂ, ಶ್ರೇಷ್ಠರನ್ನೂ ಪ್ರತ್ಯೇಕಿಸುವಂತಹವು?' ಎಂದು ಶಿಕ್ಷಕರು ತಮ್ಮನ್ನೇ ಪ್ರಶ್ನಿಸಿಕೊಳ್ಳುವುದು ಒಂದು ಒಳ್ಳೆಯ ಅರಿವು ಮೂಡಿಸುವ ಕಸರತ್ತು.

ಪರೀಕ್ಷೆಯು ಪರಿಪೂರ್ಣ ಸಮಂಜಸ ಆಗಿರುವುದು ಅಸಾಧ್ಯವಾದರೂ ಒಂದಷ್ಟು ಪ್ರಮಾಣದ ಸಮಂಜಸತೆ ಇದ್ದೇ ಇರುತ್ತದೆ ಎಂದು ನಿಮಗೆ ಗೊತ್ತಾಗುತ್ತದೆ. ಕೆಲವು ಪರೀಕ್ಷೆಗಳು ನಿರುಪಯುಕ್ತವಾಗುವಷ್ಟು ಅಸಮಂಜಸವಾಗಿದ್ದರೆ ಇನ್ನು ಕೆಲವು ಉಪಯುಕ್ತವೆನಿಸುವಷ್ಟು ಸಮಂಜಸವಾಗಿರುತ್ತವೆ. ಪ್ರತಿಯೊಂದು ಪರೀಕ್ಷೆಯ ಸಮಂಜಸತೆಯನ್ನು ಮೌಲ್ಯಮಾಪನ ಮಾಡುವ ಬೇರೆಬೇರೆ ಒಂದಷ್ಟು ವಿಧಾನಗಳಿವೆ. ದುರದೃಷ್ಟಕ್ಕೆ ಪ್ರತಿಯೊಂದಕ್ಕೂ ತನ್ನದೇ ಆದ ಸಮಸ್ಯೆಯಿದೆ!

- ಒಂದು ಸರಳ ವಿಧಾನವೆಂದರೆ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು, ಅವರ ತಿಳಿವಳಿಕೆಯ ಬಗ್ಗೆ ಶಿಕ್ಷಕರಿಗಿರುವ ಅಂದಾಜಿನೊಂದಿಗೆ ತಾಳೆಯಾಗುತ್ತದೆಯೇ ಎಂಬುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪರೀಕ್ಷೆಯ ಫಲಿತಾಂಶಗಳು ನಿಮಗೆ ಅಚ್ಚರಿಯುಂಟು ಮಾಡಿದರೆ (ತುಂಬಾ ಚೆನ್ನಾಗಿ ಗ್ರಹಿಸಿದ್ದಾರೆ ಎಂದು ನೀವು ಅಂದುಕೊಂಡಿರುವ ವಿದ್ಯಾರ್ಥಿಗಳು ತುಂಬಾ ಕಡಿಮೆ ಅಂಕ ಗಳಿಸುವುದು ಅಥವಾ ಏನು ಚೆನ್ನಾಗಿ ಗ್ರಹಿಸಿಲ್ಲ ಎಂದು ನೀವು ಅಂದುಕೊಂಡಿರುವ ವಿದ್ಯಾರ್ಥಿಗಳು ತುಂಬಾ ಅಂಕ ಗಳಿಸುವುದು) ಪರೀಕ್ಷೆಯು ಸಮಂಜಸವಾಗಿದೆ ಎಂದು ನೀವು ಪರಿಗಣಿಸುವುದಿಲ್ಲ. ಈ ಮಾನದಂಡದ ನೆಲೆಯಲ್ಲಿ, ಅನೇಕ ಪರೀಕ್ಷೆಗಳು ಸಾಕಷ್ಟು ಚೆನ್ನಾಗಿ ಕಾರ್ಯಸಾಧಿಸುತ್ತವೆ. ಅಂದರೆ, ಉತ್ತಮ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿ, ದುರ್ಬಲ ವಿದ್ಯಾರ್ಥಿಗಳು ಕಳಪೆ ಸಾಧನೆ ತೋರಿದಾಗ ಪರೀಕ್ಷೆಗಳು ಸಮಂಜಸವಾಗಿವೆ ಎಂದು ಹೆಚ್ಚಿನ ಶಿಕ್ಷಕರು ಭಾವಿಸುತ್ತಾರೆ. ಆದರೆ ಈ ತಾರ್ಕಿಕತೆಯಲ್ಲಿಯೂ ದೋಷವಿರುವ ಸಾಧ್ಯತೆ ಇದೆ. ಶಿಕ್ಷಕರಾಗಿ, ತರಗತಿಯಲ್ಲಿ ನಮ್ಮ ವಿದ್ಯಾರ್ಥಿಗಳಿಗಾಗಿ ನಾವು ರೂಪಿಸುವ ಕಾರ್ಯಚಟುವಟಿಕೆಗಳು, ಯಾವ ವಿದ್ಯಾರ್ಥಿಗಳು ಉತ್ತಮರು ಅಥವಾ ದುರ್ಬಲರು ಎಂಬ ಬಗೆಗಿನ ನಮ್ಮ ಅನಿಸಿಕೆಗಳಿಗೆ, ರೂಪ ಕೊಡುತ್ತವೆ. ಜೊತೆಗೆ ರೂಢಿಯಲ್ಲಿರುವ ಪರೀಕ್ಷೆಗಳಿಂದಲೂ ತೀವ್ರವಾಗಿ ನಮ್ಮ ಅನಿಸಿಕೆಗಳು ಪ್ರಭಾವಕ್ಕೊಳಗಾಗುತ್ತವೆ. ಈ ನಿಟ್ಟಿನಲ್ಲಿನ ಶಿಕ್ಷಕರ ಅಂದಾಜುಗಳು ಯಾವುದೇ ಸ್ವತಂತ್ರ ಮಾನದಂಡವನ್ನು ಹೊಂದಿರದಿದ್ದರೆ, ನಿಸ್ಸಂಶಯವಾಗಿಯೂ ಅವು ಪರೀಕ್ಷೆಯ ಅಂಕಗಳೊಂದಿಗೆ ತಾಳೆಯಾಗುತ್ತವೆ.

- ಪರೀಕ್ಷೆಯೊಂದರ ಸಮಂಜಸತೆಯನ್ನು ತಿಳಿಯುವ ಇನ್ನೊಂದು ವಿಧಾನವೆಂದರೆ, ಗಳಿಸಿದ ಅಂಕಗಳು ಇತರ ಪರೀಕ್ಷೆಗಳೊಂದಿಗೆ ತಾಳೆಯಾಗುತ್ತಿವೆಯೇ ಎಂದು ನೋಡುವುದು. ಈ ರೀತಿಯ ಸಮಂಜಸತೆಯ ಗ್ರಹಿಕೆಯಲ್ಲೂ ಸಮಸ್ಯೆ ಇದೆ. ಅದೆಂದರೆ, ಎಲ್ಲ ಪರೀಕ್ಷೆಗಳು ಕೆಲವು ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳುವಂತಹ ವಿಷಯಗಳಲ್ಲಿ ವಿದ್ಯಾರ್ಥಿಗಳ ಯೋಗ್ಯತೆಯನ್ನು ಅಳೆಯುತ್ತಿದ್ದರೆ ಅವೆಲ್ಲವೂ ಪರಸ್ಪರ ತಾಳೆಯಾಗಬಹುದು. ಇಷ್ಟಾಗಿಯೂ, ಅವುಗಳ ಪೈಕಿ ಯಾವುದೂ ನಿಜವಾಗಿ ತಿಳಿವಳಿಕೆಯನ್ನು ಪರೀಕ್ಷಿಸುತ್ತದೆ ಎಂದು ಅರ್ಥವಲ್ಲ.
- ಪರೀಕ್ಷೆಯ ಸಮಂಜಸತೆಯನ್ನು ಪರೀಕ್ಷಿಸುವ ಇನ್ನೂ ಒಂದು ವಿಧಾನವೆಂದರೆ, ನಿಜ ಜೀವನದಲ್ಲಿನ ಕಾರ್ಯಸಾಧನೆಯೊಂದಿಗೆ ಹೇಗೆ ಅದು ಸಹಸಂಬಂಧ ಹೊಂದಿದೆ ಎಂದು ನೋಡುವುದು. ನಿರ್ದಿಷ್ಟ ವಿಷಯವೊಂದನ್ನು ಅರ್ಥಮಾಡಿಕೊಳ್ಳುವುದು 'ಕಾರ್ಯಕ್ಷೇತ್ರದಲ್ಲಿ' ಸಕ್ಷಮತೆಗೆ ದಾರಿಮಾಡಿಕೊಡಬೇಕು ಎಂದು ನಾವು ಹೇಳಿಕೊಳ್ಳುವುದಾದರೆ, ಆ ಸಹಸಂಬಂಧವು ಉನ್ನತವಾಗಿಯೂ ಇರಬೇಕು. ಇದರಲ್ಲಿರುವ ಒಂದು ಸಮಸ್ಯೆ ಎಂದರೆ, ನಿಜಜೀವನದಲ್ಲಿನ ಸನ್ನಿವೇಶಗಳು ಶೈಕ್ಷಣಿಕ ಪರೀಕ್ಷೆಯ ಸನ್ನಿವೇಶಗಳಿಗಿಂತ ನಾಟಕೀಯ ಎಂಬಷ್ಟರಮಟ್ಟಿಗೆ ಭಿನ್ನವಾಗಿರುತ್ತವೆ. ಜನರು ನಿಜಜೀವನದಲ್ಲಿ, ತಮಗೆ ಲಭ್ಯವಿರುವ ಮಾಹಿತಿಯೊಂದಿಗೆ ಮುಕ್ತಾಂತ ಸಮಸ್ಯೆಗಳ ಮೇಲೆ ದೀರ್ಘಕಾಲ ಜತೆಗೂಡಿ ಕೆಲಸಮಾಡುತ್ತಾರೆ. ಆದರೆ, 'ಪರೀಕ್ಷಿಸುವುದು' ನಿರ್ದಿಷ್ಟವಾಗಿ ವ್ಯಕ್ತಿಗತವಾದುದು, ಕಾಲಮಿತಿಯುಳ್ಳದ್ದು, ಪೂರ್ವ ನಿರ್ದಿಷ್ಟ ವ್ಯಾಪ್ತಿಯದಾಗಿದ್ದು, ಮುಚ್ಚಿದ ಪುಸ್ತಕದೊಂದಿಗೆ ನಡೆಯುವಂತಹದ್ದಾಗಿರುತ್ತದೆ. ಆದ್ದರಿಂದ ಶಾಲೆಗಳಲ್ಲಿನ ಸಾಧನೆಯು, ಕಾಲೇಜುಗಳಲ್ಲಿನ ಸಾಧನೆಯೊಂದಿಗೆ ಚೆನ್ನಾಗಿ ತಾಳೆಯಾಗುತ್ತದೆ. ಆದರೆ ಕಾಲೇಜಿನಾಚೆ ಈ ಸಹಸಂಬಂಧ ಗಣನೀಯವಾಗಿ ಸ್ಥಗಿತಗೊಳ್ಳುವಂತೆ ಕಾಣುತ್ತದೆ. ಉದಾಹರಣೆಗೆ, ಐಎಎಸ್ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಲು ಭಾರೀ ಪ್ರಮಾಣದ ಸಾಮಾನ್ಯ ಜ್ಞಾನ ಬೇಕಾಗುತ್ತದೆ. ಆದರೆ, ಒಬ್ಬ ಯಶಸ್ವಿ ನಾಗರಿಕ ಸೇವಾ ಅಧಿಕಾರಿಯಾಗಬೇಕಾದರೆ ಉತ್ತಮ ಅಂತರ್‌ವ್ಯಕ್ತಿ ಸಂಬಂಧ ಕೌಶಲ (interpersonal skills), ವಿವೇಚನೆ ಮತ್ತು ಪ್ರಾಮಾಣಿಕತೆಗಳನ್ನು ಮೈಗೂಡಿಸಿಕೊಂಡಿರಬೇಕಾಗುತ್ತದೆ.

ಹಾಗಾಗಿ ಶೈಕ್ಷಣಿಕ ಪರೀಕ್ಷೆಯ ವಿಷಯಕ್ಕೆ ಬಂದಾಗ, ವ್ಯಾಖ್ಯೆ ಮತ್ತು ಸಮಂಜಸತೆ ಎರಡೂ ಕೂಡ, ಸೂಕ್ಷ್ಮ ವಿಷಯಗಳಾಗಿ ಬಿಡುತ್ತವೆ. ವಿಶ್ವಾಸಾರ್ಹತೆಯತ್ತ ತಿರುಗಿದರೆ, ಪರೀಕ್ಷೆಯನ್ನು ಮತ್ತೆಮತ್ತೆ ನಡೆಸಿದಾಗ ಅದು ಬಹುತೇಕ ಒಂದೇ ರೀತಿಯ ಫಲಿತಾಂಶವನ್ನು ಕೊಡುತ್ತದೆ ಎಂದು ಹೇಳಬಹುದೇ? ಇಲಾಸ್ಟಿಕ್ ಪಟ್ಟಿಯನ್ನು ಬಳಸಿ ಉದ್ದ ಅಳೆಯುವ ಪ್ರಕರಣವನ್ನು ನೆನಪಿಸಿಕೊಳ್ಳಿ. ಅಂತಹ ಒಂದು ಉಪಕರಣವು ನಿಷ್ಪ್ರಯೋಜಕ ಎಂಬುದು ಸಾಬೀತಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಅದೇ ರೀತಿಯಲ್ಲಿ, ಪುನರಾವರ್ತನೆ ನಡೆಸಿದಾಗ ಪರೀಕ್ಷೆಯೊಂದು ಒಂದೇ ರೀತಿಯ ಫಲಿತಾಂಶಗಳನ್ನು ಕೊಡದಿದ್ದರೆ ಅಂತಹ ಪರೀಕ್ಷೆಯಿಂದ ಪ್ರಯೋಜನವಾದರೂ ಏನು?

ವಾಸ್ತವವಾಗಿ ವಿಶ್ವಾಸಾರ್ಹತೆಯ ಪ್ರಶ್ನೆಯು ಕೆಲವು ಆರಂಭಿಕ ಸುಳಿಹುಗಳನ್ನು ಪಡೆದು ದೀರ್ಘಾವಧಿ ನೆನಪುಗಳನ್ನು ಮರಳಿ ತಂದುಕೊಳ್ಳುವುದಕ್ಕೆ ಸಂಬಂಧಿಸಿದೆ. ಪುನರಾವರ್ತಿತ ಪರೀಕ್ಷಿಸುವಿಕೆಯು ಉಂಟುಮಾಡುವ ಪರಿಣಾಮಗಳ ಬಗ್ಗೆ ಆಸಕ್ತರಾಗಿರುವ ಮನೋವಿಜ್ಞಾನಿ ಹೆನ್ರಿ


ರೋಡಿಗರ್ ಅವರು ಮರುಕಳಿಕೆಯ (retrieval) ಪ್ರಕ್ರಿಯೆಯು ಬಹುಮಟ್ಟಿಗೆ ಬದಲಾಗುವಂತಹದು ಮತ್ತು ಅಸ್ಥಿರವಾದುದು ಎಂದು ಕಂಡುಹಿಡಿದಿದ್ದಾರೆ. ಅಂದರೆ, ವಿದ್ಯಾರ್ಥಿ(ನಿ)ಯೊಬ್ಬ(ಳಿ)ನಿಗೆ ಒಂದೇ ರೀತಿಯ ವಿಷಯವಸ್ತುವಿನ ಮೇಲೆ ಬೇರೆಬೇರೆ ಸಂದರ್ಭಗಳಲ್ಲಿ ಪರೀಕ್ಷೆ ಮಾಡಿದಾಗ, ಯಾವಾಗಲೂ ಒಂದೇ ರೀತಿಯ ಉತ್ತರಗಳನ್ನು ಆತ/ಕೆ ನೀಡುವುದಿಲ್ಲ. ಕೆಲವೊಮ್ಮೆ ಹಿಂದಿನ ಪರೀಕ್ಷೆಗಳಲ್ಲಿ ನೆನಪಿಸಿಕೊಳ್ಳದ ಅಂಶಗಳನ್ನು ಮುಂದಿನ ಪರೀಕ್ಷೆಗಳಲ್ಲಿ ನೆನಪಿಸಿಕೊಳ್ಳುತ್ತಾನೆ/ಳೆ (ನಡುವೆ ಯಾವುದೇ ಪುನರಧ್ಯಯನ ನಡೆಸದೆಯೇ). ಪರೀಕ್ಷೆಗಳ ಪುನರಾವರ್ತನೆಯು ಹೊಸ ನೆನಪುಗಳನ್ನು ಉತ್ಪತ್ತಿ ಮಾಡಿದಂತೆ ಕಾಣುತ್ತದೆ. ಈ ಹೊಸ ನೆನಪುಗಳನ್ನು 'ಮರಳಿಪಡೆದ (recovered) ನೆನಪುಗಳು' ಎನ್ನುತ್ತಾರೆ. ಮರಳಿ ಪಡೆದ ನೆನಪುಗಳು ಒಂದು ಅಪವಾದ ಎನ್ನುವುದಕ್ಕಿಂತಲೂ ಬಹಳ ಮಾಮೂಲು ಎಂದು ರೋಡಿಗರ್ ಅವರ ಅಧ್ಯಯನಗಳು ತೋರಿಸಿವೆ. ಬಹಳ ಸಲ ಸಾಧನೆಗಳಲ್ಲಿನ ಈ ಸುಧಾರಣೆಯು, ಮರೆಯುವಿಕೆಯಿಂದಾದ ಇಳಿಕೆಗಿಂತಲೂ ಹೆಚ್ಚಿನದಾಗಿತ್ತು.

ನಮಗೆ ಗೊತ್ತಿರುವ ಪುನಃಸ್ಮರಣೆಯ ಈ ಅಸ್ಥಿರತೆಗಳಿಂದಾಗಿ, ಒಂದೇ ಪರೀಕ್ಷೆಯ ಫಲಿತಾಂಶಗಳಿಂದ ಹೆಚ್ಚಿನದೇನನ್ನೂ ನಾವು ಸಾಧಿಸಲಾರೆವು (ವಿಶೇಷವಾಗಿ ನೆನಪಿನ ಪರೀಕ್ಷೆಯಾಗಿದ್ದಾಗ). ಪರೀಕ್ಷೆಯ ಅಂಕಗಳಲ್ಲಿ ಯಾವಾಗಲೂ ಕೆಲವು ಮಾಪನದ ದೋಷಗಳು ಇದ್ದೇ ಇರುತ್ತವೆ. ಆ ದೋಷಗಳು ಯಾವುದೆಂದು ನಿಖರವಾಗಿ ನಾವು ಹೇಳಲಾರೆವಾದರೂ, ಅದು ಕನಿಷ್ಠಪಕ್ಷ ಕೆಲವು ಪ್ರತಿಶತ ಅಂಶಗಳಷ್ಟಾದರೂ ಖಂಡಿತ ಇರುತ್ತದೆ. ಪ್ರತಿಶತ ಅಂಕಗಳ ದಶಮಾಂಶವನ್ನು ಆಧರಿಸಿ ವಿದ್ಯಾರ್ಥಿಗಳ ನಡುವೆ ತಾರತಮ್ಯ ಮಾಡುವ ನಮ್ಮ ಕಾರ್ಯ ಸಮರ್ಥನೀಯವಲ್ಲ ಎಂಬುದಕ್ಕೆ ಈ ತಪ್ಪುಗಳೇ ಸಾಕು. ಉದಾಹರಣೆಗೆ ಒಬ್ಬ ವಿದ್ಯಾರ್ಥಿ 88% ಅಂಕಗಳನ್ನು ಗಳಿಸಿದ್ದಾನೆಂದರೆ, ಅವನು ಗಳಿಸಬಹುದಾದ ನೈಜ ಅಂಕಗಳು 84% ಮತ್ತು 92% ನಡುವೆ ಎಲ್ಲೋ ಇರಬಹುದು; ಆದ್ದರಿಂದ, ಆತ 85% ಅಂಕ ಗಳಿಸಿದ ಇನ್ನೊಬ್ಬ ವಿದ್ಯಾರ್ಥಿಗಿಂತ ಖಂಡಿತವಾಗಿಯೂ ಮೇಲ್ಮಟ್ಟದವನಲ್ಲ.

ಆದ್ದರಿಂದ ನನ್ನ ಪ್ರಕಾರ ಇಲ್ಲಿನ ಪ್ರಶ್ನೆಯೆಂದರೆ, ಪರೀಕ್ಷೆಯೊಂದನ್ನು ಆದಷ್ಟೂ 'ಲೋಹದ ಅಳತೆಪಟ್ಟಿ'ಯಂತೆ ನಾವು ಹೇಗೆ ಮಾಡಬಹುದು? ಇದಕ್ಕೆ ಉತ್ತರ: ಒಂದು ಪರೀಕ್ಷೆಯ ಗುಣಮಟ್ಟವನ್ನು ಖಂಡಿತ ನಾವು ಉತ್ತಮಪಡಿಸಬಹುದು. ಆದರೆ ಅದು ಎಂದೂ ಒಂದು 'ಲೋಹದ ಅಳತೆಪಟ್ಟಿ'ಯಷ್ಟು ಸಮಂಜಸ ಮತ್ತು ವಿಶ್ವಾಸಾರ್ಹ ಆಗುವುದಿಲ್ಲ. ಇದರರ್ಥ ಪರೀಕ್ಷೆಗಳಲ್ಲಿ ಗಳಿಸುವ ಅಂಕಗಳನ್ನು ವ್ಯಾಖ್ಯಾನಿಸುವ ರೀತಿಯನ್ನು ನಿಜವಾಗಿಯೂ ಬದಲಾಯಿಸುವ ಅಗತ್ಯವಿದೆ. ಆ ಅಂಕಗಳು ನಮಗೆ ಏನನ್ನು ಹೇಳುತ್ತವೆ ಎಂಬುದನ್ನು ಸದ್ಯದಂತೆ ಮುಗ್ಧವಾಗಿ ಸ್ವೀಕರಿಸುವುದು ಸಮರ್ಥನೀಯವಲ್ಲ. ಪರೀಕ್ಷಾ ಅಂಕಗಳನ್ನು ಬಳಸುವ ವಿಧಾನಗಳನ್ನು ಮುಂದಿನ ಭಾಗವು ಸಂಕ್ಷಿಪ್ತವಾಗಿ ಚರ್ಚಿಸುತ್ತದೆ.

ಪರೀಕ್ಷಾ ಅಂಕಗಳ ವ್ಯಾಖ್ಯಾನ

ನಮ್ಮ ಲೋಹದ ಅಳತೆಪಟ್ಟಿಯು ಸ್ವಲ್ಪ ಮಟ್ಟಿಗೆ (ಪೂರ್ತಿಯಾಗಿ ಅಲ್ಲವಾದರೂ) ದೋಷಪೂರಿತವಾಗಿದ್ದರೆ, ತಕ್ಕಮಟ್ಟಿನ ಅಂದಾಜಿನೊಂದಿಗೆ ಅದರ ಫಲಿತಾಂಶಗಳನ್ನು ವ್ಯಾಖ್ಯಾನಿಸುತ್ತೇವೆ. ಹಾಗೆಯೇ ರೂಪಣ ಪರೀಕ್ಷೆಯ ಮೌಲ್ಯಾಂಕನ ಬಳಸಿ ಶಿಕ್ಷಕರು ತನ್ನ ವಿದ್ಯಾರ್ಥಿಗಳನ್ನು ಪರೀಕ್ಷಿಸುವಾಗ, ಅದರ ಫಲಿತಾಂಶಗಳನ್ನು ಪರಿಪೂರ್ಣ ತೀರ್ಮಾನ



ಎನ್ನುವುದಕ್ಕಿಂತಲೂ ಹೆಚ್ಚಾಗಿ, ಒಂದು ಕಾರ್ಯಾತ್ಮಕ ಊಹೆಯಂತೆ ಬಳಸಲಾಗುತ್ತದೆ. ಶಿಕ್ಷಕರು ಇನ್ನೊಂದಿಷ್ಟು ಶೋಧ ನಡೆಸಿದಾಗ, ಇನ್ನಷ್ಟು ಪ್ರಶ್ನೆಗಳನ್ನು ಕೇಳಿದಾಗ, ಅಥವಾ ಬೇರೆಯೇ ವಿಧಾನದಲ್ಲಿ ಪರೀಕ್ಷಿಸಿದಾಗ ಈ ಊಹೆಯನ್ನು ತಕ್ಷಣ ಬದಲಾಯಿಸಲಾಗುತ್ತದೆ ಅಥವಾ ಕೈಬಿಡಲಾಗುತ್ತದೆ. ತಾವು ನಿರ್ವಹಿಸುವ ಸಣ್ಣ ತರಗತಿ ಪರೀಕ್ಷೆಗಳು ಮತ್ತು ನಿಯೋಜಿತ ಕಾರ್ಯಗಳ ಫಲಿತಾಂಶಗಳ ಆಧಾರದ ಮೇಲೆ ದೃಢ ತೀರ್ಮಾನಗಳನ್ನು ಮಾಡಕೂಡದು ಎಂಬುದು ಶಿಕ್ಷಕರಿಗೆ ಗೊತ್ತಿದೆ. ಆದರೆ 'ಸಂಕಲನಾತ್ಮಕ' ಪರೀಕ್ಷೆಗಳ ಫಲಿತಾಂಶಗಳನ್ನು ಊಹೆ ಎಂಬಂತೆ ನೋಡುವುದಿಲ್ಲ. ಆ ಸಂಖ್ಯೆಗಳನ್ನು ಪರಿಪೂರ್ಣವಾಗಿ ನಿರ್ವಹಿಸಲಾದ ಲೋಹದ ಅಳತೆಪಟ್ಟಿಯಿಂದ ಓದಲಾಗಿರುವ ಅಳತೆಗಳೆಂಬ ಮಟ್ಟಿಗೆ ನೋಡಲಾಗುತ್ತದೆ! ಅಂತಹ ಪರೀಕ್ಷೆಗಳ ಫಲಿತಾಂಶಗಳು ತೀರಾ ತಡವಾಗಿ ಬರುವುದರ ಜೊತೆಗೆ ಹಿಮ್ಮಾಹಿತಿಯಾಗಿ ಉಪಯುಕ್ತವಾಗದಷ್ಟು ಅನಿರ್ದಿಷ್ಟವಾಗಿರುತ್ತವೆ. ಬದಲಿಗೆ, ವಿದ್ಯಾರ್ಥಿಗಳ ಬಗ್ಗೆ **ನಿರ್ಧಾರ**ಗಳನ್ನು ಮಾಡಲು (ಮುಂದೆ ಯಾರಿಗೆ ಎಂತಹ ಅವಕಾಶಗಳು ಸಿಗುತ್ತವೆ ಎಂಬಂತಹವು) ಮಾತ್ರವಲ್ಲದೆ **ಶಿಕ್ಷಕರನ್ನು ಮೌಲ್ಯಮಾಪನ ಮಾಡಲು**, ಶಾಲೆಗಳು ಮತ್ತು ಶಿಕ್ಷಣ ಮಂಡಳಿಗಳನ್ನು ಮೌಲ್ಯಮಾಪನ ಮಾಡಲು ಕೂಡ ಉಪಯೋಗಿಸಲಾಗುತ್ತದೆ. ಈ ಉಪಯೋಗಗಳಿಂದಾಗಿ ಅಂತಹ ಪರೀಕ್ಷೆಗಳು ಭಾರೀ ಆಸ್ಥೆಯವೆನಿಸಿಕೊಳ್ಳುತ್ತವೆ).

ಭಾರತದಲ್ಲಿ ಒಂದು ಮಗುವಿನ ಬಗ್ಗೆ ಸೂಕ್ತ ನಿರ್ಧಾರಗಳನ್ನು ಮಾಡಲು ಪರೀಕ್ಷಾ ಅಂಕಗಳನ್ನು ಬಹುವಾಗಿ ಉಪಯೋಗಿಸಲಾಗುತ್ತದೆ. ಒಂದು ಪ್ರವೇಶಾತಿ ಮಂಡಳಿಯು ಅಥವಾ ಒಬ್ಬ ಸಂಭಾವ್ಯ ಉದ್ಯಮಿಯು ಯಾರನ್ನು ಸ್ವೀಕರಿಸುವುದು, ಯಾರನ್ನು ತಿರಸ್ಕರಿಸುವುದು ಎಂದು ಆಯ್ಕೆಮಾಡಲು ಒಂದು ನಿರ್ದಿಷ್ಟ ಸಂಖ್ಯೆಯನ್ನು ಅವಲಂಬಿಸಿದರೆ, ತಪ್ಪುಗಳಾಗಬಹುದು. ಉದ್ಯೋಗ ನಿರ್ವಹಣೆಯ ಕೆಲವು ಅಳತೆಗಳ ಎದುರು ಪರೀಕ್ಷಾ ಅಂಕಗಳ ಒಂದು ಮಾದರಿಯ ಊಹಾತ್ಮಕ ನಕ್ಷೆಯನ್ನು ಇಲ್ಲಿನ ಚಿತ್ರವು ತೋರಿಸುತ್ತದೆ; ಎಲ್ಲ ಅರ್ಜಿದಾರರನ್ನು ಸೇವೆಗೆ ತೆಗೆದುಕೊಳ್ಳಬೇಕೆ ಎಂಬುದು ಪ್ರಶ್ನೆಯಾಗಿತ್ತು. ಇವೆರಡರ ನಡುವಣ ಸಹಸಂಬಂಧ ತಕ್ಕಮಟ್ಟಿಗೆ ಬಲವಾಗಿದ್ದವು. ಇಲ್ಲಿ ಹೆಚ್ಚಿನ ಅಂಕಪಡೆದ ಬಹುತೇಕರು ಉದ್ಯೋಗದಲ್ಲಿ ಉತ್ತಮ ಸಾಧನೆ ತೋರುವುದನ್ನೂ, ಕಡಿಮೆ ಅಂಕ

ಗಳಿಸಿದ ಬಹುತೇಕರು ಉದ್ಯೋಗದಲ್ಲಿ ಕಳಪೆ ಸಾಧನೆ ತೋರುವುದನ್ನೂ ನೀವು ನೋಡಬಹುದು. ಆದರೆ, ಅಲ್ಲಿ ಕಡಿಮೆ ಅಂಕ ಪಡೆದೂ ಉದ್ಯೋಗವನ್ನು ತೃಪ್ತಿಕರವಾಗಿ ನಿರ್ವಹಿಸುವವರ, ಹಾಗೂ ಹೆಚ್ಚಿನ ಅಂಕ ಗಳಿಸಿಯೂ ಉದ್ಯೋಗವನ್ನು ತೃಪ್ತಿಕರವಾಗಿ ನಿರ್ವಹಿಸದವರ ಸಣ್ಣಸಣ್ಣ ಗುಂಪುಗಳು ಕೂಡ ಇವೆ. ಒಂದು ನಿಗದಿತ ಅಂಕಕ್ಕಿಂತ (ನಕ್ಷೆಯ ಲಂಬರೇಖೆ) ಹೆಚ್ಚಿನ ಅಂಕ ಗಳಿಸಿದವರನ್ನು ಮಾತ್ರ ಉದ್ಯೋಗಕ್ಕೆ ನೇಮಿಸಿಕೊಂಡರೆ, ಈ ಎರಡೂ ಚಿಕ್ಕ ಗುಂಪುಗಳ ಪಾಲಿಗೆ ಆ ನಿರ್ಧಾರವು ತಪ್ಪಾಗಿರುತ್ತದೆ ಮತ್ತು ಅಂತಹ ಗುಂಪುಗಳು ಕೂಡ ಅಷ್ಟು ಚಿಕ್ಕವಿರಲಾರವು.

ಪರೀಕ್ಷಾ ಅಂಕಗಳು ಮತ್ತು ಉದ್ಯೋಗ ನಿರ್ವಹಣೆಯ ನಡುವಣ ಸಂಬಂಧ ದುರ್ಬಲವಾಗುತ್ತಾ ಹೋದಂತೆ (ಇದಕ್ಕೂ ಸಮಂಜಸತೆಗೂ ಸಂಬಂಧವಿದೆ) ಅನರ್ಹರನ್ನು ಆಯ್ಕೆ ಮಾಡಿಕೊಳ್ಳುವ ಹಾಗು ಅರ್ಹರನ್ನು ಕೈಬಿಡುವ ಸಾಧ್ಯತೆಗಳು ಹೆಚ್ಚುತ್ತಾ ಹೋಗುತ್ತವೆ. ಎರಡನೆಯ ಚಿತ್ರದಲ್ಲಿ ನೀವು ಇದನ್ನು ಗಮನಿಸಬಹುದು. ಹಾಗೆಂದು ಈ ಎರಡು ತಪ್ಪುಗಳಿಂದ ಮುಕ್ತವಾದ ಪರಿಪೂರ್ಣ ನಿರ್ಧಾರ ಎನ್ನುವುದೇನೂ ಇಲ್ಲ. ಆದರೆ, ಪರೀಕ್ಷೆಯ ಸಮಂಜಸತೆಯನ್ನು ಉತ್ತಮಪಡಿಸಲು ನಾವು ಮಾಡಬಹುದಾದ ಕನಿಷ್ಠ ಸಂಗತಿಯೆಂದರೆ, ನಿರ್ಧಾರ ಕೈಗೊಳ್ಳುವಾಗ ಹಲವು ಆಧಾರಾಂಶಗಳನ್ನು (criteria) ಬಳಸುವುದು.

ಶಿಕ್ಷಕರು ಮತ್ತು ಕಾರ್ಯಕ್ರಮಗಳನ್ನು ಮೌಲ್ಯಮಾಪನ ಮಾಡಲೂ ಸಹ ಪರೀಕ್ಷಾ ಅಂಕಗಳನ್ನು ಬಳಸಲಾಗುತ್ತದೆ. ಉದಾಹರಣೆಗೆ ಅಮೆರಿಕದ ಕೆಲವು ಭಾಗಗಳಲ್ಲಿ ಅಂಕಗಳ ಆಧಾರದಲ್ಲಿ ಶಿಕ್ಷಕರು ಮತ್ತು ಶಾಲೆಗಳಿಗೆ ಪ್ರತಿಫಲ ಅಥವಾ ದಂಡನೆ ನೀಡಲಾಗುತ್ತದೆ. ಶಿಕ್ಷಕರ ವೇತನ ಹೆಚ್ಚಾಗಬಹುದು ಅಥವಾ ಅವರು ಕೆಲಸದಿಂದ ವಜಾಗೊಳ್ಳಬಹುದು. ಕಡಿಮೆ ಸರಾಸರಿ ಅಂಕ ಗಳಿಸಿದ ಶಾಲೆಗಳನ್ನು, ಸರಕಾರದಿಂದ ನೇಮಕವಾದ ಪರಿಣತರು ತಮ್ಮ ವಶಕ್ಕೆ ತೆಗೆದುಕೊಳ್ಳಬಹುದು. ಕುತೂಹಲದ ಸಂಗತಿಯೆಂದರೆ, ಒಂದು ಅಧ್ಯಯನವು, ಅಮೆರಿಕದಲ್ಲಿ ಭಾರೀ ಆಸ್ಥೆಯ ಪರೀಕ್ಷಿಸುವಿಕೆಯನ್ನು ತಮ್ಮ ಮೇಲೆ ಹೇರುವ ವಿರುದ್ಧ ಶಿಕ್ಷಕರ ಒಂದು ಗುಂಪು ವ್ಯಕ್ತಪಡಿಸಿದ ಬಲವಾದ ವಿರೋಧವನ್ನು ದಾಖಲಿಸಿದೆ. ಅವರ ಕೆಲವು ನಕಾರಾತ್ಮಕ ಭಾವನೆಗಳು ಸಹಜವಾಗಿಯೇ ತಮ್ಮನ್ನೇ 'ಪರೀಕ್ಷಿಸಲಾಗುತ್ತಿದೆ' ಮತ್ತು ಕಳಪೆ ಫಲಿತಾಂಶಗಳಿಗೆ ತಮ್ಮನ್ನು ಹೊಣೆ ಮಾಡಲಾಗುತ್ತಿದೆ ಎಂಬುದಕ್ಕೆ ಸಂಬಂಧಿಸಿದ್ದವು. ಆದರೆ, ಪರೀಕ್ಷೆಗಳು ಉತ್ತಮ ಬೋಧನಾಕ್ರಮಗಳಿಗೆ ಅಥವಾ ಅರ್ಥಪೂರ್ಣ ಕಲಿಕೆಗೆ ಅವಕಾಶ ಮಾಡಿಕೊಡುವುದಿಲ್ಲ ಎಂಬ ವಿಚಾರದ ಬಗ್ಗೆ ಶಿಕ್ಷಕರು ವಿಶೇಷವಾಗಿ ಕಳವಳಗೊಂಡಿರುವುದನ್ನು ಅಧ್ಯಯನವು ತೋರಿಸಿಕೊಟ್ಟಿತು. ಮೇರಿ ಎ ಬರ್ಕ್ಸ್‌ಡೇಲ್-ಲಾಡ್ಡ್ ಮತ್ತು ಕರೆನ್ ಥಾಪ್ಸನ್ ಬರೆದ ಈ ಪ್ರಬಂಧವು ಶಿಕ್ಷಕರ ಅನೇಕ ದೀರ್ಘ ಮತ್ತು ಕಳವಳದ ಉದ್ಗಾರಗಳನ್ನು ಒಳಗೊಂಡಿದ್ದು ಅವುಗಳಲ್ಲಿ ಕೆಲವನ್ನು ಆಯ್ದು ಕೆಳಗೆ ನೀಡಿದ್ದೇನೆ:

> 'ಪರೀಕ್ಷಿಸುವುದು ಮತ್ತು ಪರೀಕ್ಷೆ ತಯಾರಿಸುವುದರ ಮೇಲೆ ವ್ಯಯಿಸಿದ ಎಲ್ಲ ಸಮಯವನ್ನು ತೆಗೆದುಕೊಂಡು ಬೋಧನೆಗೆ ಬಳಸಿದರೆ ಏನು ಸಾಧಿಸಬಹುದು ಎಂಬುದನ್ನು ಒಮ್ಮೆ ಯೋಚಿಸಿ ನೋಡಿ . . . . ಪರೀಕ್ಷಿಸುವುದಂತೂ ಅತಿಯಾಯಿತು.'
>
> 'ಪರೀಕ್ಷೆಗಳಿಗೆ ಮಕ್ಕಳನ್ನು ತಯಾರಿಸಲು ನೈಜ ಶಿಕ್ಷಕರು ಬೇಕಾಗಿಲ್ಲ. ನಿಜ ಹೇಳಬೇಕೆಂದರೆ, ಇದನ್ನು ಮಾಡುವ ಕಂಪ್ಯೂಟರ್ ಪ್ರೋಗ್ರಾಮುಗಳನ್ನು ರೂಪಿಸಬಹುದು.'
>
> 'ಪರೀಕ್ಷೆಗಳಿಗೆಂದು ಕಲಿಯವುದು ಅರ್ಥಪೂರ್ಣವಲ್ಲ. ಅವರ ಅಂಕಗಳು ಮೇಲಿದ್ದು, ಮಕ್ಕಳ ತಿಳಿವಳಿಕೆ ಕೆಳಗಿದ್ದರೆ, ಅವರು ಮಾನದಂಡಕ್ಕಿಂತ ಕೆಳಗಿದ್ದಾರೆ.'

> 'ಹಲವಾರು ಕೆಟ್ಟ ಶಿಕ್ಷಕರನ್ನು ಈ ಪರೀಕ್ಷೆಗಳ ಮೂಲಕ ಉತ್ತಮಗೊಳಿಸಬಹುದೆಂದು ಪ್ರತಿಯೊಬ್ಬರೂ ಯೋಚಿಸುವುದರಿಂದಲೇ ಅವನ್ನು ವಿನ್ಯಾಸಗೊಳಿಸಿರಬೇಕೆಂದು ನನಗನಿಸುತ್ತದೆ. ಆದರೆ ಅದು ಹಾಗಲ್ಲ; ನಿಜ ಹೇಳಬೇಕೆಂದರೆ, ಕೆಟ್ಟ ಶಿಕ್ಷಕರಿಗೆ ತಾವು ವಿಪರೀತ ಕೌಶಲಗಳು ಮತ್ತು ಕಸರತ್ತುಗಳನ್ನು ಕಲಿಸುತ್ತಿದ್ದುದನ್ನೇ ಮುಂದುವರಿಸಿಕೊಂಡು ಹೋಗಲು ಅದೊಂದು ನೆಪ ಒದಗಿಸುತ್ತದೆ. ಕೆಟ್ಟ ಬೋಧನೆಗೆ ಅದೊಂದು ರಹದಾರಿ.'

ಜನರನ್ನು ಮತ್ತು ಕಾರ್ಯಕ್ರಮಗಳನ್ನು ಮೌಲ್ಯಮಾಪನ ಮಾಡಲು ಪರೀಕ್ಷೆಗಳನ್ನು ಬಳಸುವಲ್ಲಿನ ಸಮಸ್ಯೆಯು ಬಹುವಾಗಿ ಕಳಪೆ ಗುಣಮಟ್ಟದ ಮೌಲ್ಯಾಂಕನದಿಂದ ಉದ್ಭವಿಸುತ್ತದೆ. ಈ ಕೊನೆಯ ಭಾಗದಲ್ಲಿ ಶೈಕ್ಷಣಿಕ ಪರೀಕ್ಷೆಗಳ ಸಮಂಜಸತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ವಿಧಾನಗಳನ್ನು ನಾವು ನೋಡುತ್ತೇವೆ.

ಮೌಲ್ಯಾಂಕನವನ್ನು ಉತ್ತಮಪಡಿಸುವುದು

ಏನನ್ನು ಪರೀಕ್ಷಿಸಬೇಕಿದೆ ಎಂಬ ಸಮೃದ್ಧ ವ್ಯಾಖ್ಯೆಯಿಂದ ಮೌಲ್ಯಾಂಕನಕ್ಕೆ ಒಂದಷ್ಟು ಪ್ರಯೋಜನವಾಗಬಹುದು ಮತ್ತು ಇದು ಅಧಿಕೃತ ಮೌಲ್ಯಾಂಕನದ ಗುರಿಗಳಲ್ಲೊಂದು. ಕಳಪೆ ಪರೀಕ್ಷೆಗಳು ನೆನಪಿನ ಶಕ್ತಿಯನ್ನು ಮಾತ್ರ ಅಳೆದರೆ, ಉತ್ತಮ ಪರೀಕ್ಷೆಗಳು ನೆನಪಿನಶಕ್ತಿ, ತಿಳಿವಳಿಕೆ ಮತ್ತು ಅನ್ವಯವನ್ನು ಅಳೆಯುತ್ತವೆ. ಇನ್ನೂ ಉತ್ತಮ ಪರೀಕ್ಷೆಗಳು ಈ ಕೆಳಗಿನಂತಹ ಇನ್ನಷ್ಟು ಮುಖ್ಯ ಕೌಶಲಗಳ ಮೌಲ್ಯಾಂಕನವನ್ನು ನಡೆಸುತ್ತವೆ.

- ಮುಕ್ತಾಂತ ಸಮಸ್ಯೆಗಳನ್ನು ಬಿಡಿಸುವುದು
- ಸಮಸ್ಯೆಗಳನ್ನು ರಚಿಸುವುದು
- ಊಹೆಗಳನ್ನು ಮಾಡುವುದು ಮತ್ತು ನಿರ್ದಿಷ್ಟಪಡಿಸುವುದು
- ಗುಂಪಿನಲ್ಲಿ ಕೆಲಸ ಮಾಡುವುದು
- ಹೊಸ ಅಲೋಚನೆಗಳಿಗೆ ತೆರೆದುಕೊಂಡಿರುವುದು
- ದತ್ತಾಂಶಗಳೊಂದಿಗೆ ಕೆಲಸ ಮಾಡುವುದು
- ವಿವಿಧ ದೃಷ್ಟಿಕೋನಗಳನ್ನು ಬಳಸುವುದು
- ವೈಫಲ್ಯಗಳಿದ್ದೂ ಮುಂದುವರಿಯುವುದು
- ತಾವೇ ಮೌಲ್ಯಾಂಕನ ಮಾಡಿಕೊಂಡು ತಾವೇ ಸರಿಪಡಿಸಿಕೊಳ್ಳುವುದು
- ಮಾಹಿತಿಯನ್ನು ಮೌಖಿಕವಾಗಿ ಪ್ರಸ್ತುತಪಡಿಸುವುದು
- ಅಸ್ತವ್ಯಸ್ತವಾಗಿರುವುದನ್ನು ಕ್ರಮಗೊಳಿಸುವುದು

ಮೌಲ್ಯಾಂಕನವು ಇಂತಹ ಸಮಗ್ರ ಪಟ್ಟಿಯೊಂದನ್ನು ಆಧರಿಸುವುದು ಎರಡು ಕಾರಣಗಳಿಗೆ ಉತ್ತಮ. ಮೊದಲನೆಯದಾಗಿ, ನೈಜ ಜಗತ್ತಿನಲ್ಲಿ ಈ ಕೌಶಲಗಳಿಗೆ ಬೆಲೆಕೊಡಲಾಗುತ್ತದೆ; ಇವನ್ನು ಗಣನೆಗೆ ತೆಗೆದುಕೊಳ್ಳುವ ಮೌಲ್ಯಾಂಕನವು ಹೆಚ್ಚು ಸಮಂಜಸವಾಗಿರುತ್ತದೆ. ಎರಡನೆಯದಾಗಿ, ಬೋಧನೆ ಮತ್ತು ಪಠ್ಯಕ್ರಮದ ಮೇಲೆ ಇಂತಹ ಮೌಲ್ಯಾಂಕನದ 'ಧ್ರುವೀಕರಣ ಪರಿಣಾಮ'ವು ಒಳ್ಳೆಯದಕ್ಕೇ ಆಗಿರುತ್ತದೆ. 'ಧ್ರುವೀಕರಣ ಪರಿಣಾಮ'ವೆಂದರೆ ಪರೀಕ್ಷೆಗಳ ಆವಶ್ಯಕತೆಗಳಿಗೆ ಶಿಕ್ಷಕರು ಮತ್ತು

ಪಠ್ಯಕ್ರಮ ತಮ್ಮನ್ನು ತಾವು ಸರಿಹೊಂದಿಸಿಕೊಳ್ಳುವ ಪ್ರವೃತ್ತಿ ಎಂಬುದನ್ನು ನೆನಪಿಸಿಕೊಳ್ಳಿ. ಹೀಗಾಗಿ ಮೌಲ್ಯಾಂಕನವನ್ನು ಉತ್ತಮಪಡಿಸುವುದರಿಂದ ಬೋಧನಾ ಕ್ರಮವು ಉತ್ತಮಗೊಳ್ಳುತ್ತದೆ ಅಥವಾ ಕನಿಷ್ಠಪಕ್ಷ ವ್ಯಾಪಕ ಪರೀಕ್ಷಾ ಸುಧಾರಣೆಗಳ ಹಿಂದೆ ಇರುವ ಆಶಾಭಾವನೆ ಇದುವೇ ಆಗಿದೆ.

ಅಧಿಕೃತ ಮೌಲ್ಯಾಂಕನದ ಒಂದು ಉತ್ತಮ ಸಂಶೋಧಿತ ರೂಪವನ್ನು **ಸಂಪುಟ ವಿಧಾನ** ಎನ್ನುತ್ತಾರೆ. 'ಸಂಪುಟ'ವೆಂದರೆ ತರಗತಿಯ ಪಠ್ಯಕ್ರಮ ಮತ್ತು ಕಲಿಸುವಿಕೆಯನ್ನು ಪ್ರತಿಬಿಂಬಿಸುವ ವಿದ್ಯಾರ್ಥಿಗಳ ಪ್ರತಿದಿನದ ಕೆಲಸದ ಆಯ್ಕೆ ಎಂದು ಮನೋವಿಜ್ಞಾನಿ ಸ್ಕಾಟ್ ಪ್ಯಾರಿಸ್ ಮತ್ತು ಅವರ ಸಹೋದ್ಯೋಗಿಗಳು ವ್ಯಾಖ್ಯಾನಿಸುತ್ತಾರೆ. ವಿದ್ಯಾರ್ಥಿ 'ಸಂಪುಟ'ಗಳನ್ನು ಅಮೆರಿಕದ ಅನೇಕ ಶಾಲೆಗಳಲ್ಲಿ ಪೂರಕ ಮತ್ತು ಹೆಚ್ಚು ಅರ್ಥಪೂರ್ಣ ಮೌಲ್ಯಾಂಕನವಾಗಿ ಯಶಸ್ವಿಯಾಗಿ ಉಪಯೋಗಿಸಲಾಗಿದೆ. ಪ್ರತಿಯೊಂದು 'ಸಂಪುಟ'ವೂ ವಿದ್ಯಾರ್ಥಿಯ ತರಗತಿ ಕಾರ್ಯದ ಪ್ರಾತಿನಿಧಿಕ ಮಾದರಿಯಾಗಿದ್ದು, ತರಗತಿಯಲ್ಲಿ ಆಕೆಯ ನಿರ್ವಹಣೆಯ ವೈವಿಧ್ಯಮಯ ಪುರಾವೆಗಳನ್ನೊಳಗೊಂಡಿರುತ್ತದೆ. ವಿದ್ಯಾರ್ಥಿಯೊಂದಿಗೆ ಕುಳಿತು ಸೂಕ್ತ ಮಾದರಿಗಳನ್ನು (sample) ಆಯ್ದುಕೊಳ್ಳುವುದನ್ನು ಬಿಟ್ಟರೆ ಯಾವುದೇ ಹೆಚ್ಚುವರಿ ಕೆಲಸಬೇಕಿಲ್ಲ. ಹೀಗೆ, 'ನಾನು ಹಂಚಿಕೊಳ್ಳಬಯಸಿರುವ ಯತ್ನ ಅಥವಾ ಕೌಶಲವನ್ನು ಈ ಕೆಲಸವು ತೋರಿಸುತ್ತದೆಯೇ?' ಎಂದು ಸ್ವತಃ ಪ್ರಶ್ನಿಸಿಕೊಳ್ಳುತ್ತ ವಿದ್ಯಾರ್ಥಿಗಳು ತಮ್ಮ ಮೌಲ್ಯಾಂಕನವನ್ನು ತಾವೇ ಮಾಡಿಕೊಳ್ಳುವಂತಾಗುತ್ತಾರೆ. ಪ್ಯಾರಿಸ್ ಅವರ ಪ್ರಕಾರ 'ಸಂಪುಟಗಳು' ಮೂರು ವಿಭಿನ್ನ ರೀತಿಯ ಸಾಕ್ಷ್ಯಾಧಾರಗಳನ್ನು ಒಳಗೊಂಡಿರುತ್ತವೆ: 'ನಿರ್ವಹಣೆ' (ವಿದ್ಯಾರ್ಥಿಗಳು ಏನನ್ನು ಓದಬಲ್ಲರು/ಬರೆಯಬಲ್ಲರು/ಲೆಕ್ಕಹಾಕಬಲ್ಲರು ಎಂಬುದರ ನಿತ್ಯದ ಉದಾಹರಣೆಗಳು), 'ಪ್ರತಿಕ್ರಿಯೆ' (ಕಾರ್ಯತಂತ್ರಗಳು ಮತ್ತು ವಿಧಾನಗಳ ಸಾಕ್ಷಿ) ಮತ್ತು 'ಗ್ರಹಿಕೆ' (ಲಿಖಿತ ಸ್ವಂತ ಆಲೋಚನೆಗಳು ಅಥವಾ ಸ್ವಮೌಲ್ಯಮಾಪನ).

ಮೌಲ್ಯಾಂಕನದಲ್ಲಿ ಇತ್ತೀಚಿನ ಇನ್ನೊಂದು ಹೊಸ ಶೋಧವೆಂದರೆ **ಸಹಯೋಗರೂಪದ ಪರೀಕ್ಷೆ** (collaborative test). ಮನೋವಿಜ್ಞಾನದಲ್ಲಿ ಕಳೆದ ಸುಮಾರು 50 ವರ್ಷಗಳಿಂದ ದೊಡ್ಡ ಹೆಸರಾಗಿರುವ ಫಿಲಿಪ್ ಝಿಂಗಾರ್ಡೋ ಇತ್ತೀಚೆಗೆ ತಮ್ಮ ಗಮನವನ್ನು, ಪರೀಕ್ಷೆಗೊಳಗಾಗುವವರ ತಳಮಳ ಪರೀಕ್ಷಿಸುವತ್ತ ಮತ್ತು ಅದನ್ನು ತಗ್ಗಿಸುವತ್ತ ತಿರುಗಿಸಿದ್ದಾರೆ. ತಮ್ಮದೇ ಮನೋವಿಜ್ಞಾನ ಕೋರ್ಸ್‌ಗಳಲ್ಲಿ ಹೊಸದೊಂದು ಚಿಂತನೆಯನ್ನು ಪ್ರಯೋಗಿಸಿ ನೋಡಲು ಅವರು ನಿರ್ಧರಿಸಿದರು. ತಮ್ಮ ಸಹಪಾಠಿಗಳಲ್ಲಿ ತಮ್ಮ ಆಯ್ಕೆಯ ಸಂಗಾತಿಯೊಂದಿಗೆ ಅಥವಾ ಸಂಗಾತಿರಹಿತವಾಗಿ ಪರೀಕ್ಷೆ ತೆಗೆದುಕೊಳ್ಳುವ ಆಯ್ಕೆಯನ್ನು ವಿದ್ಯಾರ್ಥಿಗಳಿಗೆ ನೀಡಲಾಯಿತು! ಸಹಯೋಗಿ ಜೋಡಿಯು ಒಟ್ಟಿಗೇ ಒಂದೇ ಒಂದು ಉತ್ತರಪತ್ರಿಕೆಯನ್ನು ಸಲ್ಲಿಸಬೇಕು ಮತ್ತು ಒಂದೇ ಶ್ರೇಣಿಯನ್ನು ಅದಕ್ಕೆ ನೀಡಲಾಗುತ್ತದೆ, ಹೀಗಾಗಿ ವ್ಯಕ್ತಿಗತ ಕೆಲಸವೇ ಮುಖ್ಯವಾಗುವುದಿಲ್ಲ ಎಂದು ಅವರಿಗೆ ತಿಳಿಸಲಾಯಿತು. ಇಂತಹದೊಂದು ಕುತೂಹಲಕರ ಯೋಚನೆಗೆ ವಿದ್ಯಾರ್ಥಿಗಳು ಹೇಗೆ ಪ್ರತಿಕ್ರಿಯಿಸಿದರು ಎಂದು ನೀವು ಊಹಿಸುತ್ತೀರಿ? ಅವರ ಪೈಕಿ ಸುಮಾರು 40% ಮಂದಿ ಒಬ್ಬ ಸಂಗಾತಿಯೊಂದಿಗೆ ಪರೀಕ್ಷೆ ಬರೆಯಲು ಬಯಸಿದರು. ಏಕಾಂಗಿಯಾಗಿ ಕೆಲಸಮಾಡಲು ಬಯಸಿದ ಹೆಚ್ಚಿನವರು ಹಾಗೆ ಮಾಡಲು ಕಾರಣ ತನ್ನ ಸಂಗಾತಿಯು ಕಡಿಮೆ ಕೆಲಸ ಮಾಡಬಹುದೇನೋ ಎಂಬ ಭಯ. ಆದರೆ, ವಾಸ್ತವದಲ್ಲಿ, ಕೇವಲ 20% ಜೋಡಿಗಳು ತಾವು ಕೆಲಸವನ್ನು ವಿಭಜಿಸಿಕೊಂಡು ಮಾಡಿದುದಾಗಿ ಹೇಳಿಕೊಂಡರು. ಅವರಲ್ಲಿ ಹೆಚ್ಚಿನವರು ಪರೀಕ್ಷೆಗೆ ನಿಗದಿಪಡಿಸಿದ ಇಡೀ ಪಾಠಭಾಗವನ್ನು ಅಧ್ಯಯನ ನಡೆಸಿದರು; ಅಥವಾ ಪ್ರತ್ಯೇಕವಾಗಿ ಪರೀಕ್ಷೆ ಬರೆಯುತ್ತಿದ್ದರೆ ಎಷ್ಟು ಓದುತ್ತಿದ್ದರೋ ಅಷ್ಟು ಓದಿದರು.



ಫಲಿತಾಂಶಗಳು ತೋರಿಸಿಕೊಟ್ಟ ಪ್ರಕಾರ, ಪ್ರತ್ಯೇಕವಾಗಿ ಪರೀಕ್ಷೆ ಬರೆದವರಿಗೆ ಹೋಲಿಸಿದರೆ, ಸಹಯೋಗದಲ್ಲಿ ಪರೀಕ್ಷೆ ಬರೆದವರು ಸರಾಸರಿ ಹೆಚ್ಚು ಅಂಕಗಳನ್ನು ಗಳಿಸಿದರು. ಅಲ್ಲದೆ, ಈ ಕ್ರಮವನ್ನು ಅವರು ಹೆಚ್ಚು ಇಷ್ಟಪಟ್ಟರು; ತಮ್ಮ ಜ್ಞಾನವನ್ನು ಹೆಚ್ಚು ಹಂಚಿಕೊಂಡರು; ಮತ್ತು ಪರೀಕ್ಷೆಗಳ ಬಗ್ಗೆ ಕಡಿಮೆ ಆತಂಕ ಹೊಂದಿದ್ದರು. ತಮ್ಮ ಹೆಚ್ಚಿನ ಕೋರ್ಸ್‌ಗಳಲ್ಲಿ ತಾವು 'ಸಹಯೋಗ ರೂಪದ ಪರೀಕ್ಷೆ' ಬಳಸಲು ಬಯಸುವುದಾಗಿ ಕೂಡ ಅವರು ಝಿಂಬಾರ್ಡೋಗೆ ಹೇಳಿದರು. ಝಿಂಬಾರ್ಡೋ ಹೇಳುವ ಹಾಗೆ, ಸಹಯೋಗ ವಿಧಾನವು ಆತಂಕವನ್ನು ತಗ್ಗಿಸುವುದಾದರೂ, ಕೂಡಿ ಕೆಲಸ ಮಾಡುವುದಕ್ಕೆ ನೈಜ ಜಗತ್ತು ನೀಡುವ ಆದ್ಯತೆಯ ದೃಷ್ಟಿಯಿಂದ ಅದು ಇನ್ನೂ ಹೆಚ್ಚು ಸಮಂಜಸವಾದುದು. ವಿದ್ಯಾರ್ಥಿಗಳು ಹೊಂದಾಣಿಕೆ ಮಾಡಿಕೊಳ್ಳಬೇಕು, ಹಂಚಿಕೊಳ್ಳಬೇಕು, ಮತ್ತು ಸಹಕರಿಸಿಕೊಳ್ಳಬೇಕು ಹಾಗೂ ಇಂದು ಬಹುತೇಕ ಯಾವುದೇ ವೃತ್ತಿತಾಣದಲ್ಲಿಯೂ ಇವು ಅಮೂಲ್ಯ ಕೌಶಲಗಳು.

ಮೂರನೆಯ ಉದಾಹರಣೆ ಎಂದರೆ, ವಿವರಣಾತ್ಮಕ ಬರವಣಿಗೆಗಳ (rubrics) ಬಳಕೆ. ಉದಾಹರಣೆಗೆ ಒಬ್ಬ ವಿದ್ಯಾರ್ಥಿಯು, ಅರಬ್ ಮತ್ತು ಇಸ್ರೇಲ್ ನಡುವಿನ ಸಂಘರ್ಷದ ಬಗ್ಗೆ ಒಂದು ಪ್ರಬಂಧ ಬರೆದಿದ್ದಾನೆ ಎಂದಿಟ್ಟುಕೊಳ್ಳೋಣ. ಆತನ ಶಿಕ್ಷಕರು ಆ ಪ್ರಬಂಧಕ್ಕೆ ಹತ್ತು ಅಂಕಗಳಿಗೆ ಸೂಕ್ತ ಅಂಕಗಳನ್ನು ನೀಡಬೇಕಿದೆ. ಕೇವಲ ಒಂದೇ ಒಂದು ಸಂಖ್ಯೆಯು ಏಕಕಾಲಕ್ಕೆ ಸ್ಪಷ್ಟತೆ, ವಿಷಯ ವ್ಯಾಪ್ತಿ, ತಿಳಿವಳಿಕೆಯ ಆಳ, ಭಾಷೆಯ ಸೂಕ್ಷ್ಮತೆ ಹೀಗೆ ಅನೇಕ ಆಧಾರಾಂಶಗಳನ್ನು ಪ್ರತಿಬಿಂಬಿಸುತ್ತವೆ. ಈ ಸನ್ನಿವೇಶಕ್ಕೆ ವಿವರಣಾತ್ಮಕ ಬರವಣಿಗೆಗಳನ್ನು ತಯಾರಿಸುವ ಮೊದಲ ಹೆಜ್ಜೆಯಾಗಿ ಈ ಆಧಾರಾಂಶಗಳನ್ನು ಪಟ್ಟಿ ಮಾಡಬೇಕಾಗುತ್ತದೆ. ಆನಂತರ ಪ್ರತಿಯೊಂದು ಆಧಾರಾಂಶವನ್ನು ಆಧರಿಸಿ ಸಾಧನೆಯ ವಿಭಿನ್ನ ಮಟ್ಟಗಳನ್ನು ಪದಗಳಲ್ಲಿ ವಿವರಿಸಬಹುದು. ಉದಾಹರಣೆಗೆ, ಸ್ಪಷ್ಟತೆಯ ಆಧಾರಾಂಶಕ್ಕೆ ಮಟ್ಟಗಳು ಹೀಗಿರಬಹುದು:

1. ವಿಷಯ ಮಂಡನೆಯನ್ನು ಸರಿಯಾಗಿ ಮಾಡಿಲ್ಲ, ಒಟ್ಟಾರೆಯಾಗಿ ಗೊಂದಲದಿಂದ ಕೂಡಿದ ಪ್ರಬಂಧ.
2. ಕೆಲವು ವಿಷಯಗಳನ್ನು ಸ್ಪಷ್ಟವಾಗಿ ಮಂಡಿಸಲಾಗಿದೆ; ಉಳಿದವು ಬಹುಪಾಲು ಗೊಂದಲದಿಂದ ಕೂಡಿವೆ.
3. ಅನೇಕ ಸ್ಪಷ್ಟ ವಿಷಯಗಳು ಇವೆ; ಕೆಲವು ಅಂಶಗಳು ಮಾತ್ರ ಗೊಂದಲದಿಂದ ಕೂಡಿವೆ.
4. ಎಲ್ಲಾ ವಿಷಯಗಳನ್ನು ಸ್ಪಷ್ಟವಾಗಿ ಪ್ರಸ್ತುತಪಡಿಸಲಾಗಿದೆ; ಒಟ್ಟಾರೆಯಾಗಿ ಅತ್ಯಂತ ಸ್ಪಷ್ಟ ಪ್ರಬಂಧ.

ಎಲ್ಲಾ ಆಧಾರಾಂಶಗಳಿಗೂ ಹೀಗೆಯೇ ಮಾಡಬೇಕಾಗುತ್ತದೆ ಮತ್ತು ಫಲಿತಾಂಶವು ಒಂದು ಮಾತೃಕೆ (matrix) ಅಥವಾ ವಿವರಣಾತ್ಮಕ ಬರಹವಾಗಿರುತ್ತದೆ. ವಿವರಣಾತ್ಮಕ ಬರಹವನ್ನು ಅನೇಕ ಶಾಲೆಗಳಲ್ಲಿ ಪ್ರಯೋಗಿಸಿ ನೋಡಿದ್ದು, ಅದು ಅದ್ಭುತ ಫಲಿತಾಂಶವನ್ನು ನೀಡಿದೆ. ಅದರ ಅತಿ ದೊಡ್ಡ ಪ್ರಯೋಜನವೆಂದರೆ, ವಿದ್ಯಾರ್ಥಿಗಳ ಮೇಲೆ ಅದರ ಪರಿಣಾಮ. ಅವರು ತಮ್ಮ ಕೆಲಸ ಮುಗಿಸುವ ಮೊದಲೇ ಅದನ್ನು ತೋರಿಸಲಾಗುತ್ತದೆ. ಅದು ಅವರಿಗೆ ತಲುಪತಕ್ಕ ಮಟ್ಟವನ್ನು ತಿಳಿಯಪಡಿಸುತ್ತದೆ ಮತ್ತು ಸಾಧ್ಯವಿರುವ ಗರಿಷ್ಠ ಮಟ್ಟಗಳನ್ನು ತಲಪಲು ಹುರಿದುಂಬಿಸುತ್ತದೆ.[20]

ನಾನಾ ಪರ್ಯಾಯ ಮೌಲ್ಯಾಂಕನ ವಿಧಾನಗಳ ಯಶಸ್ಸು ಮತ್ತು ಸ್ಪಷ್ಟ ಪ್ರಯೋಜನಗಳನ್ನು ನೋಡುವಾಗ ಎಲ್ಲ ಕಡೆ ಅವನ್ನು ಏಕೆ ಅಳವಡಿಸಿಕೊಂಡಿಲ್ಲ ಎಂದು ಯಾರಿಗೇ ಆದರೂ ಅಚ್ಚರಿಯುಂಟಾಗುತ್ತದೆ. ಹಾಗೆ ಮಾಡಿದರೆ ಏನನ್ನು ಕಳೆದುಕೊಳ್ಳುವ ಭಯ ನಮಗಿದೆ? ಪ್ರಾಯಶಃ ಉತ್ತರ: ವಸ್ತುನಿಷ್ಠತೆ ಮತ್ತು ಸುಲಭ ಪರಿಮಾಣಾತ್ಮಕ 'ನಿಗದಿತ ಕನಿಷ್ಠ ಅಂಕಗಳು' (cut-off). ಅಧಿಕೃತ ಮೌಲ್ಯಾಂಕನಕ್ಕೆ ಗುಣಮಟ್ಟದ ಅನೇಕ ಆಯಾಮಗಳಿಗೆ ಮಾನವ ತೀರ್ಪು ಬೇಕಾಗಬಹುದು. ಈಗಾಗಲೇ ಪ್ರಬಂಧಗಳನ್ನು ಶ್ರೇಣೀಕರಿಸುವ ಶಿಕ್ಷಕರು ಹೀಗೆ ಮಾಡುತ್ತಾರೆ: ಅವರು ಶೈಲಿ, ಸ್ಪಷ್ಟತೆ, ವಿಸ್ತರಣೆ ಇತ್ಯಾದಿಗಳ ಬಗ್ಗೆ ತೀರ್ಪು ನೀಡುತ್ತಾರೆ. ಒಂದೇ ಪ್ರಬಂಧಕ್ಕೆ ಇಬ್ಬರು ಪ್ರತ್ಯೇಕ ವ್ಯಕ್ತಿಗಳು ಅಂಕ ನೀಡುವಾಗ ಮತ್ತು ಒಂದೇ ಪ್ರಬಂಧಕ್ಕೆ ಒಬ್ಬ ವ್ಯಕ್ತಿ ಎರಡು ಭಿನ್ನ ಸಂದರ್ಭಗಳಲ್ಲಿ ಅಂಕ ನೀಡುವಾಗ ಕೂಡ ಸಹಮತ ತುಂಬಾ ಕಡಿಮೆ ಇರುವುದನ್ನು ತೋರುವ ಮೂಲಕ ಪ್ರಬಂಧಕ್ಕೆ ಅಂಕ ನೀಡುವುದರ ವಿಶ್ವಾಸಾರ್ಹತೆ ಕುರಿತ ಹಿಂದಿನ ಸಂಶೋಧನೆಗಳು ತುಂಬಾ ನಿರಾಶಾದಾಯಕವಾಗಿವೆ. ಇದು ಅಂತಹ ಮೌಲ್ಯಾಂಕನದ ವಸ್ತುನಿಷ್ಠತೆಯ ಬಗ್ಗೆ ವಿಪರೀತ ಅನುಮಾನವನ್ನು ಹುಟ್ಟುಹಾಕುವಂತೆ ಮಾಡಿವೆ. ಇನ್ನೊಂದು ಸಮಸ್ಯೆಯೆಂದರೆ, ಸರಳಸಂಕ್ಷಿಪ್ತ ಸಂಖ್ಯೆಗಳು ಮತ್ತು ಅದರ ಮೇಲೆ ವಿದ್ಯಾರ್ಥಿಯೊಬ್ಬನ ಬೆಲೆಯನ್ನು ನಿರ್ಧರಿಸುವುದು ನಮಗೆ ಅಭ್ಯಾಸವಾಗಿಬಿಟ್ಟಿದೆ.


ಈ ಬಿಕ್ಕಟ್ಟಿನಿಂದ ಪಾರಾಗುವ ದಾರಿಯಿದೆಯೇ? ಗುಣಾತ್ಮಕ ಮೌಲ್ಯಾಂಕನದತ್ತ ಮತ್ತೊಮ್ಮೆ ನಾವು ಕಣ್ಣು ಹಾಯಿಸಬೇಕಾಗುತ್ತದೆ. ಏಕೆಂದರೆ, ಅದನ್ನು ಸಂಪೂರ್ಣವಾಗಿ ತಿರಸ್ಕರಿಸಿದರೆ, ಸದ್ಯದ ವ್ಯವಸ್ಥೆ ಮತ್ತು ಅದರ ಸಮಸ್ಯೆಗಳಿಗೆ ಪರ್ಯಾಯಗಳೇ ಉಳಿಯುವುದಿಲ್ಲ. ಗುಣಾತ್ಮಕ ಮೌಲ್ಯಾಂಕನದ ಕೆಲವು ಗುಣಗಳು ನಮ್ಮನ್ನು ಚಿಂತೆಗೀಡುಮಾಡಬಲ್ಲವು.

---

20 'ದನವನ್ನು ತಕ್ಕಡಿಯಲ್ಲಿ ತೂಗಿ ನೋಡುವುದರಿಂದ ಅದೇನೂ ದಪ್ಪಗಾಗುವುದಿಲ್ಲ' – ಇದನ್ನು ಹೇಳಿದ್ದು ಹೆಸರಾಂತ ಶಿಕ್ಷಣತಜ್ಞರಾದ ಆಲ್ಬರ್ಟ್ ಶ್ಯಾಂಕರ್. ಮಕ್ಕಳನ್ನು ಕೇವಲ ಪರೀಕ್ಷೆಗೊಳಪಡಿಸುವುದರಿಂದ ಅವರೇನೂ ಜಾಣರಾಗುವುದಿಲ್ಲ ಎಂದು ಹೇಳಲು ಅವರು ಯತ್ನಿಸುತ್ತಿದ್ದರು. ಹಾಗಿದ್ದೂ, ಅವರ ವಿಚಾರವನ್ನು ಒಪ್ಪಿಕೊಂಡು ಅದನ್ನು ಮಂಡಿಸುವ ಅವರ ವಿಧಾನವನ್ನು ಮೆಚ್ಚುತ್ತಲೇ, ಆ ದೃಷ್ಟಿಯನ್ನು ನಾವು ಹೀಗೆ ಮುಂದುವರಿಸಬಹುದು. ಒಂದು ವೇಳೆ ತೂಕದ ಯಂತ್ರಗಳನ್ನು ದನವು ಓದುವಂತಿದ್ದರೆ, ದಪ್ಪನಾಗಲು ಬಯಸಿದರೆ, ಅಲ್ಲದೆ, ದಪ್ಪ ಆಗಲು ತಾನು ಏನು ಮಾಡಬೇಕು ಎನ್ನುವುದು ಅದಕ್ಕೆ ತಿಳಿದಿದ್ದರೆ ಆಗ ಏನಾಗುತ್ತಿತ್ತು? ಇದನ್ನು, 'ಮಟ್ಟಗಳನ್ನು ತಮ್ಮವಾಗಿಸಿಕೊಳ್ಳುವುದು' ಎಂದು ಕರೆಯುತ್ತಾರೆ. ಇದು ಕಿರುಪರೀಕ್ಷೆಗಳನ್ನು ಮತ್ತು ಪರೀಕ್ಷೆಗಳನ್ನು ಬರೆಯುವ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತದೆ. ವಿದ್ಯಾರ್ಥಿಗಳನ್ನು ತಮ್ಮ ಕಲಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಲು ಸಾಧ್ಯವಾದರೆ, ಉತ್ತಮ ಸಾಧನೆಯ ಮಟ್ಟಗಳ ಬಗ್ಗೆ ಅವರಿಗೆ ಹೇಳುವುದು ಸಾಧ್ಯವಾದರೆ, ಆಗ ಅವರು ಮಟ್ಟಗಳನ್ನು 'ತಮ್ಮವಾಗಿಸಿಕೊಳ್ಳುತ್ತಾರೆ'. ಅವರು ಮೌಲ್ಯಾಂಕನದ ಫಲಿತಾಂಶಗಳನ್ನು ತಮ್ಮ ಕಲಿಕೆಯ ಸುಧಾರಣೆಗೆ ಬಳಸುತ್ತಾರೆ ಮತ್ತು ಆಗ ದನಗಳ ತೂಗುವಿಕೆಯು ಅವನ್ನು ದಪ್ಪಗಾಗಿಸುತ್ತದೆ!

- ಕೆಲವು ಪ್ರಕರಣಗಳಲ್ಲಿ, ಶೈಕ್ಷಣಿಕ ಸಾಧನೆಯ ಆಧಾರಾಂಶಗಳು, ಸ್ಪಷ್ಟವಾಗಿ ಸರಿ ಅಥವಾ ತಪ್ಪು ಎಂದು ಹೇಳುವಷ್ಟರಮಟ್ಟಿಗೆ ನಿಖರವಾಗಿವೆ ಎಂಬುದು ನಮಗೆ ಗೊತ್ತಿದೆ. ಇವುಗಳಿಗೆ ಉದಾಹರಣೆಗಳು ಬಹುಶಃ ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಅಕ್ಷರ ಮತ್ತು ವ್ಯಾಕರಣಗಳಲ್ಲಿ ಕಾಣಸಿಗುತ್ತವೆ. ಆದರೆ, ಈ ಭಾಗದ ಆರಂಭದಲ್ಲಿ ಪಟ್ಟಿಮಾಡಲಾದ ಅನೇಕ ಕೌಶಲಗಳ ವಿಷಯದಲ್ಲಿ, ಈ ಆಧಾರಾಂಶಗಳು ಬಹುತೇಕ ಅಸ್ಪಷ್ಟವಾಗಿರುತ್ತವೆ. ಉದಾಹರಣೆಗೆ, ಪ್ರಬಂಧವೊಂದಕ್ಕೆ 'ತುಂಬಾ ಸ್ಪಷ್ಟ' ಮತ್ತು 'ಸಂಪೂರ್ಣ ಗೊಂದಲಮಯ' ಎಂಬ ತೀರ್ಮಾನಗಳ ನಡುವೆ ಅನೇಕ ಸಂಭಾವ್ಯ ಸ್ಥಿತಿಗಳಿರುತ್ತವೆ.
- ಗುಣಾತ್ಮಕ ಸ್ಥಾನಗಳು ವ್ಯಕ್ತಿನಿಷ್ಠವಾದುವಾಗಿರುವುದರಿಂದ ಉತ್ತರಪತ್ರಿಕೆಗಳ ಮೌಲ್ಯಮಾಪನ ಸಮಯದಲ್ಲಿ 'ಮುಂದಕ್ಕೊಯ್ಯುವ' (carry over) ಪರಿಣಾಮಗಳಿಗೆ ಬಲಿಬೀಳಬಹುದು (ಒಬ್ಬ ವಿದ್ಯಾರ್ಥಿಯ ಸಾಧನೆಯನ್ನು ಉತ್ತಮ ಎಂದು ತೀರ್ಮಾನಿಸುವಾಗ, ಹಿಂದಿನ ಇನ್ನೊಬ್ಬ ವಿದ್ಯಾರ್ಥಿಯ ಕಳಪೆ ಸಾಧನೆಯನ್ನು ಗಮನದಲ್ಲಿಟ್ಟುಕೊಳ್ಳುವುದು). 'ಪ್ರಭಾವಳಿ' ಪರಿಣಾಮಗಳು (ವಿದ್ಯಾರ್ಥಿಯ ವೈಯಕ್ತಿಕ ವರ್ಚಸ್ಸು ನಮ್ಮ ಮೌಲ್ಯಾಂಕನದ ಮೇಲೆ ಪರಿಣಾಮ ಬೀರುವುದು), ಮೌಲ್ಯಮಾಪಕರ ವ್ಯಕ್ತಿತ್ವದ ಪರಿಣಾಮ (ಕಟ್ಟುನಿಟ್ಟು ಅಥವಾ ಉದಾರ ರೀತಿ) ಮತ್ತು ಬಾಹ್ಯ ಪರಿಣಾಮಗಳು (ಅಚ್ಚುಕಟ್ಟುತನ ಅಥವಾ ಕೈಬರಹ).
- ಸಾಧನೆ ಎನ್ನುವುದು ಏಕಕಾಲಕ್ಕೆ ಬಹು ಆಧಾರಾಂಶಗಳ ಒಂದು ಫಲ. ಅಂದರೆ, ನೀವು ಇಬ್ಬರು ವಿದ್ಯಾರ್ಥಿಗಳನ್ನು ಒಂದೇ ಆಯಾಮದಲ್ಲಿ ತುಲನೆ ಮಾಡುವಂತಿಲ್ಲ.

ಇವು ತಪ್ಪಿಸಿಕೊಳ್ಳಲಾಗದ ಸಮಸ್ಯೆಗಳಾಗಿ ಕಾಣಬಹುದು, ಆದರೆ, ವ್ಯಕ್ತಿನಿಷ್ಠತೆ ಎಂದರೆ 'ಮನಸೋ ಇಚ್ಛೆ' ಅಥವಾ 'ಪಕ್ಷಪಾತ'ದ್ದು ಎಂದಾಗಬೇಕಿಲ್ಲ ಮತ್ತು ವಸ್ತುನಿಷ್ಠತೆಯೇ ಒಂದು ಭ್ರಮೆಯಾಗಿರಬಹುದು ಎಂದು ಅರ್ಥಮಾಡಿಕೊಳ್ಳಲು ನಮಗೆ ಅದು ಸಹಾಯ ಮಾಡಬಹುದು. ಬಹುಆಯ್ಕೆ ಪರೀಕ್ಷೆ ಮಾಡುವಲ್ಲಿನ ಹಂತಗಳಾದ ಪ್ರಶ್ನೆಗಳನ್ನು ಆಯ್ದುಕೊಳ್ಳುವುದು, ಪದಜೋಡಣೆ ಮತ್ತು ಪ್ರಶ್ನೆಗಳ ಕ್ರಮ ಮುಂತಾದವುಗಳೇ ವ್ಯಕ್ತಿನಿಷ್ಠವಾದಂತಹವು. ಆದರೆ 'ಸರಿ' ಎಷ್ಟಿವೆ ಎಂದು



ನಿರ್ಧರಿಸುವ ಅಂತಿಮ ಹಂತವು ಪರಿಪೂರ್ಣವಾಗಿ ವಸ್ತುನಿಷ್ಠವಾಗಿರಬಹುದು. ಗುಣಾತ್ಮಕ ಮೌಲ್ಯಾಂಕನ ಕಾರ್ಯದ ಸಂದರ್ಭದಲ್ಲಿ ಈ ವಸ್ತುನಿಷ್ಠತೆಯನ್ನು ತರಬೇತುಗೊಂಡ ಶಿಕ್ಷಕರ ಒಂದು ಗುಂಪಿನಲ್ಲಿನ ಸಹಮತ ಎಂದು ವ್ಯಾಖ್ಯಾನಿಸಬೇಕು. (i) ಮೌಲ್ಯಾಂಕನದ ಕಾರ್ಯವಿಧಾನಗಳನ್ನು (procedures) ಜಾಗ್ರತೆಯಿಂದ ರೂಪಿಸುವ ಮೂಲಕ ಅದನ್ನು ಸಾಧಿಸಬಹುದು. (ii) ಈ ಕಾರ್ಯವಿಧಾನಗಳಲ್ಲಿ ಶಿಕ್ಷಕರನ್ನು ತರಬೇತುಗೊಳಿಸುವುದು ಮತ್ತು (iii) ಶಿಕ್ಷಕರ ನಡುವೆ ಸಮಾಲೋಚನೆಗಳನ್ನು ಏರ್ಪಡಿಸಿ, ಆ ಮೂಲಕ ಅವರಲ್ಲಿ ಸಹಮತ ರೂಪುಗೊಳ್ಳುವಂತೆ ಮಾಡುವುದು. ಇನ್ನೂ ಉತ್ತಮವೆಂದರೆ, ಮಾಪಕಗಳನ್ನು ಸಾರ್ವಜನಿಕಗೊಳಿಸಿ, ಇತರ ಶಿಕ್ಷಕರು, ಪೋಷಕರು, ಕಾಲೇಜುಗಳು, ಉದ್ಯೋಗದಾತರು ಮತ್ತು ವಿದ್ಯಾರ್ಥಿಗಳಿಗೆ ಕೂಡ ಸಿಗುವಂತೆ ಮಾಡಬಹುದು. ಒಮ್ಮೆ ಶಿಕ್ಷಕರು ಈ ಕಾರ್ಯವಿಧಾನದಲ್ಲಿ ತರಬೇತು ಹೊಂದಿ, ಇದನ್ನು ಪರಿಚಯಿಸಿಕೊಂಡರೆಂದರೆ ಗುಣಾತ್ಮಕ ಮೌಲ್ಯಾಂಕನ ಕಾರ್ಯವು ಪಾರಂಪರಿಕ ಅಂಕ ನೀಡಿಕೆ ಕಾರ್ಯಕ್ಕಿಂತ ಕಷ್ಟಕರವಾಗಬೇಕಿಲ್ಲ.

ಅಂತಿಮ ವಿಚಾರವೆಂದರೆ, ಯಾವುದೇ ಒಂದು ಬಾರಿಯ ಪರೀಕ್ಷೆ ಅಥವಾ ಒಂದು ಪರೀಕ್ಷೆಯ ಪ್ರಸಂಗವು ಪರಮ ಪ್ರಾಮುಖ್ಯತೆಯನ್ನು ಪಡೆಯಕೂಡದು. ನಿರ್ದಿಷ್ಟ ಸಮಯ ಮತ್ತು ಪರೀಕ್ಷೆಗಳನ್ನು ಆಧರಿಸಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಹೀಗೆ ಮಾಡುವುದರಿಂದ ಶಿಕ್ಷಕರು ಮತ್ತು ವಿದ್ಯಾರ್ಥಿ ಅಸ್ಥಿರತೆಗಳ ಪರಿಣಾಮಗಳನ್ನು ನಾವು ಕಡಿಮೆ ಮಾಡುತ್ತಿರುತ್ತೇವೆ, ಆ ಮೂಲಕ ಅಂತಿಮ ಫಲಿತಾಂಶವು ಹೆಚ್ಚು ವಿಶ್ವಾಸಾರ್ಹವಾಗುತ್ತದೆ. ಹಾಗಿದ್ದೂ ಇಲ್ಲೊಂದು ಗಹನವಾದ ಎಳೆಯಿದ್ದು ಈ ಅಧ್ಯಾಯಕ್ಕೆ ಚೆಂದದ ಮುಕ್ತಾಯವನ್ನು ನೀಡುತ್ತದೆ. **ನಾವು ಬಹುತೇಕ ಶೈಕ್ಷಣಿಕ ನಿರ್ವಹಣೆಯನ್ನು (performance) ಅಳೆಯುತ್ತೇವಾದರೂ, ನಾವು ಅಳೆಯಬೇಕಿರುವುದು ಸಾಮರ್ಥ್ಯವನ್ನು (competence)**. ಸಾಮರ್ಥ್ಯವನ್ನು ಉತ್ತಮವಾಗಿ ಅಳೆಯುವ ಏಕೈಕ ರೀತಿಯೆಂದರೆ ವಿಭಿನ್ನ ಸಂದರ್ಭಗಳಲ್ಲಿ, ಕಾಲಕಾಲಕ್ಕೆ, ವಿಭಿನ್ನ ಕೌಶಲಗಳ ಸಾಧನೆಯ ಮಾದರಿಯನ್ನು (sample) ತೆಗೆದುಕೊಳ್ಳುವುದು.

ಕೊನೆಯದಾಗಿ

ರಾಷ್ಟ್ರೀಯ ಪಠ್ಯಕ್ರಮ ನೆಲಗಟ್ಟು–2005 (National Curriculum Framework–2005)ರಲ್ಲಿ ಮೌಲ್ಯಾಂಕನ ಮತ್ತು ಮೌಲ್ಯಮಾಪನದ ಉಲ್ಲೇಖವಿದೆ. ನಾವಿಲ್ಲಿ ಎತ್ತಿರುವ ಅನೇಕ ಅಂಶಗಳನ್ನು ಅನುಮೋದಿಸುವ ಜತೆಗೆ, ಸುಧಾರಣೆಯ ಉದ್ದೇಶದಿಂದ ಈ ವರದಿಯು ಕೆಲವು ವಾಸ್ತವಿಕ ಸಲಹೆಗಳನ್ನು ಸೇರಿಸುತ್ತದೆ. ಉದಾಹರಣೆಗಳೆಂದರೆ, ತೆರೆದಪುಸ್ತಕ ವಿಧಾನದ ಪರೀಕ್ಷೆಗಳು, ಸಮಯಮಿತಿರಹಿತ ಪರೀಕ್ಷೆಗಳು, ಗಣಿತ ಮತ್ತು ಇಂಗ್ಲಿಷ್ ಸಾಮರ್ಥ್ಯದ ಎರಡು ಅಥವಾ ಮೂರು ಹಂತಗಳ ಪರೀಕ್ಷೆಗಳನ್ನು ನೀಡುವುದು, ಶಿಕ್ಷಕರು ಮತ್ತು ಇತರ ವೃತ್ತಿಪರಿಣತರಿಂದ ಉತ್ತಮ ಪರೀಕ್ಷಾ ಪ್ರಶ್ನೆಗಳ ಒಂದು ಬೃಹತ್‌ಸಂಗ್ರಹ ತಯಾರಿಸುವುದು ಹಾಗೂ 10ನೇ ಮತ್ತು 12ನೇ ತರಗತಿಯ ಅಂತಿಮ ಪರೀಕ್ಷೆಗಳನ್ನು ಹೊರತುಪಡಿಸಿ ಎಲ್ಲ ಮಂಡಳಿ ಪರೀಕ್ಷೆಗಳನ್ನು ರದ್ದುಪಡಿಸುವುದು. ಇವು, ಈ ಅಧ್ಯಾಯ ತೋರಿಸಿರುವಂತೆ ಸಮರ್ಥ ಮನೋವೈಜ್ಞಾನಿಕ ತತ್ವಗಳನ್ನು ಆಧರಿಸಿದ್ದು, ಒಂದು ವೇಳೆ ಜಾರಿಗೆ ತಂದರೆ, ಭಾರತದಲ್ಲಿ ಮೌಲ್ಯಾಂಕನದ ಸ್ವರೂಪ ನಿಜಕ್ಕೂ ಬದಲಾಗುವುದರಲ್ಲಿ ಅನುಮಾನವಿಲ್ಲ.

ಮೌಲ್ಯಾಂಕನ ಮತ್ತು ಮೌಲ್ಯಮಾಪನವನ್ನು ಬದಲಾಯಿಸಲು ಒಂದು ಅತಿ ದೊಡ್ಡ ಕಾರಣವೆಂದರೆ, ವಿದ್ಯಾರ್ಥಿಗಳು ಅನುಭವಿಸುವ ಒತ್ತಡದ ಹೊರೆ. ಸಾಮಾನ್ಯವಾಗಿ ಹಲವು ಮಕ್ಕಳ ಪಾಲಿಗೆ ಶಾಲೆಯು ಒತ್ತಡದ ಅನುಭವವಾಗಬಲ್ಲುದು. ಎಳೆಯರು ನಾನಾ ವಿಧದ ಸವಾಲುಗಳನ್ನು ಎದುರಿಸಬೇಕಿದ್ದು, ಮುಂದಿನ ಅಧ್ಯಾಯವು ಶೈಕ್ಷಣಿಕ ಸಂದರ್ಭದಲ್ಲಿ ಭಾವನಾತ್ಮಕ ಆರೋಗ್ಯದ ವಿಷಯವನ್ನು ಪರಿಶೀಲಿಸುತ್ತದೆ.